ಕರ್ನಾಟಕ ಚಿತ್ರಕಲಾ ಪರಿಷತ್ತು

ಗಣಪತಿಯ ರೂಪಗಳು

ಚಿತ್ರಕಲಾ ಪರಿಷತ್ತಿನ ಪ್ರಕಾಶನಮಾಲೆ — 1
ಸಂಪಾದಕರು: ಎಂ. ಎಸ್. ನಂಜುಂಡರಾವ್

ಗಣಪತಿಯ ರೂಪಗಳು

ಸಂಪಾದಕರು

ವಿದ್ಯಾಲಂಕಾರ ಪ್ರೊ॥ ಸಾ. ಕೃ. ರಾಮಚಂದ್ರ ರಾವ್

ಕರ್ನಾಟಕ ಚಿತ್ರಕಲಾ ಪರಿಷತ್ತು, ಆರ್ಟ್ ಕಾಂಪ್ಲೆಕ್ಸ್, ಕುಮಾರ ಕೃಪ ರಸ್ತೆ, ಬೆಂಗಳೂರು - 560 001

© ಕರ್ನಾಟಕ ಚಿತ್ರಕಲಾ ಪರಿಷತ್ತು

© Karnataka Chitrakala Parishat

ಬೆಲೆ: ರೂ. 40.

Price: Rs. 40.

ವಿನ್ಯಾಸ ಮತ್ತು ಅಕ್ಷರ ಸಂಯೋಜನೆ: ಈಸ್ಟರ್ನ್ ಫೋಟೋಟೈಪ್, ಬೆಂಗಳೂರು ೫೬೦ ೦೨೯. ಮುದ್ರಣ: ಈಸ್ಟರ್ನ್ ಪ್ರೆಸ್, ಬೆಂಗಳೂರು ೫೬೦ ೦೨೯.

Layout and Typesetting: Eastern Fototype, Bangalore 560 029. Printing: Eastern Press, Bangalore 560 029.

ಮೊದಲ ಮಾತು

ಮೈಸೂರು ಅರಮನೆಯ ಒತ್ತಾಸೆಯಿಂದ ಬೆಳೆದು ಬಂದ ಚಿತ್ರಶೈಲಿಗೆ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಿಂದ (1794-1869) ನಿದರ್ಶನಗಳು ದೊರೆತಿವೆ. ಇವುಗಳಲ್ಲಿ ಮುಖ್ಯವಾದುದು 'ಶ್ರೀ ತತ್ತ್ವ ನಿಧಿ' ಎಂಬ ಸಚಿತ್ರ ಧಾರ್ಮಿಕ ವಿಶ್ವಕೋಶ; ಮುಮ್ಮಡಿಯವರ ಕಾಲದಲ್ಲೆ, ಅವರ ಪ್ರೇರಣೆಯಿಂದಲೆ ಸಿದ್ಧವಾದುದು. ಇದು ಇನ್ನೂ ಪ್ರಕಾಶನದ ಅವಕಾಶಕ್ಕೆ ಕಾದು ಕೂತಿದೆ. ಇದರಲ್ಲಿನ ಚಿತ್ರಗಳಿಗೆ ಕರಡುಗಳಂತೆ ಆ ಕಾಲದ ಚಿತ್ರಗಾರರು ಸಿದ್ಧಪಡಿಸಿಕೊಂಡ ರೇಖಾಚಿತ್ರಗಳ ಸುರುಳಿಯೊಂದು ಮುಮ್ಮಡಿಯವರ ಆಸ್ಥಾನದಲ್ಲಿ ಚಿತ್ರಗಾರರಾಗಿದ್ದು ಅವರ ಆಪ್ತವರ್ಗಕ್ಕೆ ಸೇರಿದ್ದ ವೀರಣ್ಣ ಎಂಬ ಚಿತ್ರಗಾರರ ವಂಶದವರ ವಶದಲ್ಲಿದೆ. ಈ ವಂಶದ ಇಂದಿನ ಹಿರಿಯ ಚಿತ್ರಗಾರರು ಶ್ರೀ ವೈ. ಸುಬ್ರಹ್ಮಣ್ಯರಾಜು ಅವರು. ಅವರ ಸೌಜನ್ಯದಿಂದ ಕರ್ನಾಟಕ ಚಿತ್ರಕಲಾ ಪರಿಷತ್ತು ಇದನ್ನು ದೊರಕಿಸಿಕೊಂಡು ಈ ಸುರುಳಿಯಲ್ಲಿರುವ ಚಿತ್ರಗಳನ್ನು ಕೆಲವು ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆ ಹಾಕಿಕೊಂಡಿದೆ:

ಸಂಪುಟ 1 ಗಣಪತಿ : ಸಂಪುಟ 2 ಶಕ್ತಿ : ಸಂಪುಟ 3 ಶಿವ-ಸ್ಕಂದ : ಸಂಪುಟ 4 ವಿಷ್ಣು: ಸಂಪುಟ 5 ನವಗ್ರಹಗಳು ಇತ್ಯಾದಿ

ಈಗ ಮೊದಲ ಸಂಪುಟ ಹೊರಬರುತ್ತಿದೆ. ಈ ಪ್ರಕಾಶನದ ಹೊಣೆಯನ್ನು ಹೊತ್ತ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಚೇತನವಾದ ಶ್ರೀ ಎಂ.ಎಸ್. ನಂಜುಂಡರಾಯರು ಈ ಸಂಪುಟಗಳ ಸಂಪಾದನೆಯ ಕೆಲಸವನ್ನು ನನ್ನ ಪಾಲಿಗೆ ಒಪ್ಪಿಸಿದ್ದಾರೆ. ಈ ಉಪಕಾರಕ್ಕಾಗಿ ಅವರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಈ ಚಿತ್ರ ಸಂಗ್ರಹದ ಇಂದಿನ ಒಡೆಯರಾದ ಶ್ರೀ ವೈ. ಸುಬ್ರಹ್ಮಣ್ಯರಾಜು ಅವರಿಗೂ, ಮುದ್ರಣದ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿರುವ ಈಸ್ಟರ್ನ್ ಪ್ರೆಸ್ ಒಡೆಯರಾದ ಶ್ರೀ ಚಿಂತಾಮಣಿ ಅವರಿಗೂ ಧನ್ಯವಾದ ಸಲ್ಲಬೇಕು.

— ಸಾ.ಕೃ. ರಾಮಚಂದ್ರ ರಾವ್

ಪ್ರಕಾಶಕರ ನುಡಿ

ಶ್ರೀ ಗಣಪತಿಯ ರೂಪಗಳು ಪ್ರಕಟಣೆಯಾಗುತ್ತಿರುವ ಈ ಶುಭ ಸಂದರ್ಭದಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್ತು ಹಮ್ಮಿಕೊಂಡಿರುವ ಪ್ರಕಟಣೆ ಮಾಲೆಯ ಸಂಪುಟಗಳಲ್ಲಿ ಅನೇಕ ಪುಷ್ಪಗಳು ಅರಳಲಿವೆ. ಕರ್ನಾಟಕ ಭಿತ್ತಿಚಿತ್ರಗಳು ಹಾಗೂ ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ಸಂಪಾದಿಸಲಾದ ಶ್ರೀ ತತ್ವ ನಿಧಿ ಹಾಗೂ ಸಚಿತ್ರ ರಾಮಾಯಣ ಇತರ ಅಮೂಲ್ಯ ಗ್ರಂಥಗಳ ಪ್ರಕಟಣೆ ಮುಂಬರುವ ವರ್ಷಗಳಲ್ಲಿ ಆಗುವುದೆಂಬ ಭರವಸೆ ನಮ್ಮದಾಗಿದೆ.

ಪ್ರಸ್ತುತ ಶ್ರೀ ಗಣಪತಿಯ ರೂಪಗಳು ಚಿತ್ರಕಲಾ ಪರಿಷತ್ತಿನ ಉಪಾಧ್ಯಕ್ಷರೂ, ಪ್ರಸಿದ್ಧ ಚಿತ್ರಕಾರರೂ ಆದ ಶ್ರೀ ವೈ. ಸುಬ್ರಮಣ್ಯ ರಾಜುರವರ ಮನೆತನದ ಸಂಗ್ರಹದಿಂದ ಆಯ್ದ ಪ್ರಥಮ ಕುಸುಮವಾಗಿದೆ. ಚಿತ್ರಕಲಾ ಪರಿಷತ್ತು ಅವರಿಗೆ ಋಣಿ. ವಿದ್ಯಾಲಂಕಾರ ಪ್ರೊ. ಎಸ್.ಕೆ. ರಾಮಚಂದ್ರರಾವ್‌ರವರು ಈ ಗ್ರಂಥವನ್ನು ವಿದ್ವತ್‌ಪೂರ್ಣವಾಗಿ ಸಂಪಾದಿಸಿಕೊಟ್ಟು ಮಹದುಪಕಾರ ಮಾಡಿದ್ದಾರೆ. ಅವರಿಗೆ ನಾವು ಚಿರಋಣಿಗಳು. ಈಸ್ಟ್ರನ್ ಪ್ರೆಸ್‌ನ ಶ್ರೀ ಎಂ.ಎಸ್. ಚಿಂತಾಮಣಿಯವರು ತಮ್ಮ ವಿಶ್ವಾಸ ಹಾಗೂ ಉತ್ಸಾಹದಿಂದ ಈ ಪ್ರಕಟಣೆಯನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳು.

ಭಾರತೀಯ ಚಿತ್ರಕಲಾ ಪ್ರಪಂಚದಲ್ಲಿ ಈ ಕುಸುಮ ತನ್ನ ಶ್ರೇಯಸ್ಸನ್ನು ವಿಜೃಂಭಿಸಿದರೆ ನಾವು ಧನ್ಯರು.

ಶಕ ಸಂ:1911, ವೈಶಾಖ ಬಹುಳ ಪಂಚಮಿ.
27.5.1989.

ಕೆ.ಎಸ್. ನಾಗರತ್ನಮ್ಮ
ಅಧ್ಯಕ್ಷರು

1

ಕನ್ನಡನಾಡಿನಲ್ಲಿ, ಮೈಸೂರಿನ ಕಡೆ, ಸಾಂಪ್ರದಾಯಿಕ ಚಿತ್ರಕಲೆಯ ಹೊಸ ಹೊನಲೊಂದು ಮೈಸೂರು ಸೀಮೆಯ ಅರಸರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ (1794-1869) ಹರವಾಗಿ ತೋರಿಕೊಂಡಿತು. ಈ ಹೊನಲಿಗೆ ಮೂಲ ಯಾವುದೆಂದು ಬೆರಳಿಟ್ಟು ಕಾಣಿಸುವುದು ಕಷ್ಟ. ಈ ಅರಸರ ಕಾಲಕ್ಕೆ ಮೊದಲೆ ಶ್ರೀರಂಗಪಟ್ಟಣದಿಂದ ದೊರೆತನ ಮಾಡುತ್ತಿದ್ದ ನವಾಬ ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲೂ ಚಿತ್ರಕಲೆಗೆ ಒತ್ತಾಸೆಯಿದ್ದಿತು. ಟಿಪ್ಪು ಸುಲ್ತಾನನನ್ನು ಆಂಗ್ಲರು 1799ರಲ್ಲಿ ಶ್ರೀರಂಗಪಟ್ಟಣದಲ್ಲಿ ಕೊನೆಗಾಣಿಸಿದ ಮೇಲೆ, ಮೈಸೂರು ಸೀಮೆಯ ಅರಸೊತ್ತಿಗೆಯನ್ನು ಮುಂದುವರಿಸಿದಾಗ, ಕಾರುಬಾರು ಬಂದದ್ದು ಮುಮ್ಮಡಿ ಕೃಷ್ಣರಾಜ ಒಡೆಯರ ಕೈಗೇ. ಅವರಿಗಾಗ ಆರೇ ವರ್ಷ ವಯಸ್ಸಾಗಿದ್ದುದರಿಂದ, ಹಿಂದಿನ ಆಳರಸರ ಕಾಲದಲ್ಲಿ ಆಡಳಿತವನ್ನು ದಿಟ್ಟತನದಿಂದ ಜಾಣ್ಮೆಯಿಂದ ಪ್ರಾಮಾಣಿಕತೆಯಿಂದ ನಿರ್ವಹಿಸಿದ್ದ ದಿವಾನ ಪೂರ್ಣಯ್ಯನದ್ದೇ ಆಡಳಿತ; ಮಹಾರಾಣಿ ಲಕ್ಷ್ಮಮ್ಮಣ್ಣಿ ರೀಜೆಂಟ್. 1812ರಲ್ಲಿ ಪೂರ್ಣಯ್ಯ ತೀರಿಕೊಂಡಾಗ, ಹದಿನೆಂಟು ವರ್ಷ ಹರಯದ ಮುಮ್ಮಡಿ ಕೃಷ್ಣರಾಜ ಒಡೆಯರೇ ನೇರವಾಗಿ ಆಳತೊಡಗಿದರು.

ಆದರೆ ಮುಂದೆ ಹದಿನೆಂಟು ವರ್ಷಗಳಲ್ಲೇ ಆಂಗ್ಲರು ನಾಡಿನಲ್ಲಿ ಅತಂತ್ರವೆಂಬ ನೆಪದಿಂದ ಆಡಳಿತವನ್ನು ತಾವೇ ವಹಿಸಿಕೊಂಡು, ಮುಮ್ಮಡಿಯವರು 1869ರಲ್ಲಿ ತೀರಿಕೊಳ್ಳುವವರೆಗೂ ಕಮಿಷನರುಗಳ ಮೂಲಕ ಕಾರುಬಾರು ನಡೆಸಿದರು. ಮುಮ್ಮಡಿಯವರು ಹೆಸರಿಗೆ ಮಾತ್ರ ರಾಜರು, ಮಹಾರಾಜರು; ಅಧಿಕಾರವೆಲ್ಲ ಆಂಗ್ಲರದ್ದೆ. ಸಾಹಿತ್ಯ, ಸಂಗೀತ, ಚಿತ್ರಕಲೆ, ಪೂಜೆಪುನಸ್ಕಾರಗಳಲ್ಲಿ ಆಸಕ್ತಿಯಿದ್ದುದರಿಂದ ಮುಮ್ಮಡಿಯವರಿಗೆ ಇದರಿಂದ ಒಂದು ಬಗೆಯಲ್ಲಿ ಅನುಕೂಲವೇ ಆಯಿತು. ಕಲಾವಿದರಿಗೆ, ಸಾಹಿತಿಗಳಿಗೆ, ಪಂಡಿತರಿಗೆ ಅವರಿಂದ ಪ್ರೋತ್ಸಾಹ ದೊರಕಿತು; ಅವರಿಂದಲೂ ಗ್ರಂಥರಚನೆ ಸಾಕಷ್ಟು ಸಾಗಿತು.

ಈ ಅರಸರ ಹೆಸರಿನಲ್ಲಿ ಒಟ್ಟು ಐವತ್ತೊಂಬತ್ತು ಗ್ರಂಥಗಳಿವೆ; ಮಂತ್ರ, ತಂತ್ರ, ಧರ್ಮ, ಜ್ಯೋತಿಷ್ಯ, ಕಾವ್ಯ ಮೊದಲಾದ ಹಲವು ಪ್ರಕಾರಗಳಿಗೆ ಸೇರಿದವು. ಈ ಸಂಗ್ರಹದಲ್ಲಿ ಅರಸರ ಹೆಸರಿನಲ್ಲಿ ಆಸ್ಥಾನ ಪಂಡಿತರ ಬರಹಗಳು ಸೇರಿರುವ ಸಾಧ್ಯತೆಯುಂಟು. ಆದರೆ ಅರಸರೂ ಬರಹಗಾರರು, ಬುದ್ಧಿವಂತರು, ರಸಿಕರು. ಬಹುಮಟ್ಟಿಗೆ ಅವರ ರಚನೆಗಳೆ ಆಗಿದ್ದರೆ ಆಶ್ಚರ್ಯವಲ್ಲ. ಅದು ಹೇಗಾದರಿರಲಿ. ನಮಗೆ ಸದ್ಯಕ್ಕೆ ಪ್ರಸಕ್ತವಾದುದು ಅವರ ಕೃತಿಗಳಲ್ಲಿ ಕಾಣಬರುವ ಚಿತ್ರಣ. ಸಾಹಿತಿಗಳೂ ಚಿತ್ರಗಾರರೂ ಗ್ರಂಥಗಳ ಸಿದ್ಧತೆಯಲ್ಲಿ ಪಾಲ್ಗೊಳ್ಳುತ್ತಿದ್ದ ಕಾಲ ಅದು. ಈ ದೃಷ್ಟಿಯಿಂದ ಮುಖ್ಯವಾದುದು 'ಶ್ರೀ ತತ್ತ್ವನಿಧಿ' ಎನ್ನುವ ಬೃಹದ್‌ಗ್ರಂಥ; ಇದರಲ್ಲಿ ಸೊಗಸಾದ, ಬಹುಸಂಖ್ಯೆಯ ಚಿತ್ರಗಳಿರುವುದರಿಂದ. ಸಾಂಪ್ರದಾಯಿಕ ಚಿತ್ರಕಲೆಯ ಹೊಸ ಹೊನಲನ್ನು ನಾವು ಗುರುತಿಸಬಹುದಾದುದು ಇಲ್ಲೆ.

ಇದು ಅರಸರ, ಅಥವಾ ಅವರ ಆಸ್ಥಾನದ ಯಾವೊಬ್ಬ ಪಂಡಿತರ ಸ್ವಂತ ರಚನೆಯಲ್ಲ; ಬೇರೆಬೇರೆ ಆಗಮ ಭಾಗಗಳಿಂದ, ಶಾಸ್ತ್ರ ಗ್ರಂಥಗಳಿಂದ ವಿವರಗಳನ್ನು ಆಯ್ದುಕೊಂಡು ಮಾಡಿರುವ ಸಂಕಲನ. ಲಿಪಿ ಕನ್ನಡ, ಭಾಷೆ ಬಹುಮಟ್ಟಿಗೆ ಸಂಸ್ಕೃತ. ಇದರಲ್ಲಿ ಶಕ್ತಿನಿಧಿ, ವಿಷ್ಣುನಿಧಿ, ಶಿವನಿಧಿ, ಬ್ರಹ್ಮನಿಧಿ, ಗ್ರಹನಿಧಿ, ವೈಷ್ಣವನಿಧಿ, ಶೈವನಿಧಿ, ಆಗಮನಿಧಿ, ಕೌತುಕನಿಧಿ ಎಂಬ 'ನವ-ನಿಧಿ' ಗಳಿವೆ. ಹೀಗೆ ಒಂಬತ್ತು ಭಾಗಗಳಲ್ಲಿ ನಮ್ಮ ಧಾರ್ಮಿಕ ಸಂಸ್ಕೃತಿಯ ವಿಶ್ವಕೋಶವೊಂದನ್ನೆ ಇಲ್ಲಿ ಸಿದ್ಧಪಡಿಸಿದ್ದಾರೆ. ಒಂದೊಂದು ಭಾಗದಲ್ಲೂ ಆಯಾ ದೇವತೆಗಳು, ಅವತಾರಗಳು, ಲೀಲಾಮೂರ್ತಿಗಳು, ಪುರಾಣ ಪ್ರಸಂಗಗಳು ಇವನ್ನು ಚಿತ್ರಗಳಲ್ಲಿ ನಿರ್ದೇಶಿಸಿರುವುದು ಸ್ವಾರಸ್ಯವಾಗಿದೆ. ಚಿತ್ರಗಳು ಕಲಾದೃಷ್ಟಿಯಿಂದ ಸೊಗಸಾಗಿವೆ. ಮುಖ್ಯವಾಗಿ ಅವು ರೇಖಾಚಿತ್ರಗಳು; ನವುರಾಗಿ, ಲಘುವಾಗಿ, ವರ್ಣಸಂಯೋಜನೆಯೂ ಉಂಟು. ಆಗಮನಿರೂಪಣೆಗೆ, ಧ್ಯಾನಶ್ಲೋಕಗಳಿಗೆ ತಕ್ಕಂತೆ ಮೂರ್ತಿಚಿತ್ರಣವಿದ್ದರೂ ಚಿತ್ರಗಾರರ ಸ್ವಾತಂತ್ರ್ಯ, ಕೌಶಲ, ಸೃಜನಶೀಲತೆಗಳಿಗೆ ಅವಕಾಶವಿರುವುದನ್ನು ಗಮನಿಸಬಹುದು.

ಈ ಚಿತ್ರಗಳನ್ನು ಸಿದ್ಧಪಡಿಸಿದ ಕಲಾವಿದರು ಯಾರು? ನಿಖರವಾಗಿ ನಮಗೆ ತಿಳಿಯಬರದಿದ್ದರೂ, ಮುಮ್ಮಡಿಯವರ ಆಸ್ಥಾನದಲ್ಲಿದ್ದ ವೀರಣ್ಣ, ತಿಪ್ಪಾಜಿ ಎಂಬಿಬ್ಬರು ಚಿತ್ರಗಾರರ ಉಲ್ಲೇಖವಿದೆ. ಇವರಿಬ್ಬರು ಮುಮ್ಮಡಿಯವರ ಆಪ್ತವರ್ಗದಲ್ಲಿ ಸೇರಿದ್ದವರು. ಇವರ ಕೈವಾಡ 'ಶ್ರೀತತ್ತ್ವನಿಧಿ'ಯ ಚಿತ್ರಸಂಗ್ರಹದಲ್ಲಿ ಇರುವುದು ಸಾಧ್ಯ. ಈ ಊಹೆಗೆ ಒತ್ತಾಸೆಯಾಗಿ ವೀರಣ್ಣನ ಮನೆತನದಲ್ಲಿ ಚಿತ್ರಗಳ ಸಂಗ್ರಹದ ಸುರುಳಿಯೊಂದಿದ್ದು, 'ಶ್ರೀತತ್ತ್ವನಿಧಿ'ಯ ಚಿತ್ರಗಳಿಗೆ ಮೂಲರೇಖಾ ಟಿಪ್ಪಣಿಗಳಂತೆ ಇದೆ. ತಂಜಾವೂರು ಚಿತ್ರಗಾರರ ಮತ್ತು ಮೈಸೂರು ಚಿತ್ರಗಾರರ ಮನೆಗಳಲ್ಲಿ ಈ ಬಗೆಯ ಚಿತ್ರಸಂಗ್ರಹಗಳಿರುವುದು ವಾಡಿಕೆ. ಚಿತ್ರಗಾರರು ವರ್ಣಚಿತ್ರಗಳನ್ನು ದೊಡ್ಡ ಪ್ರಮಾಣದಲ್ಲಿ ಗೋಡೆಗಳ ಮೇಲೋ ಹಲಗೆಗಳ ಮೇಲೋ ಬಿಡಿಸುವ ಮುನ್ನ ಆ ಚಿತ್ರಗಳ ಸಣ್ಣ ಪ್ರಮಾಣದ ಕರಡುಗಳಂತಿರುವ ಮೊದಲಬರಹಗಳನ್ನು ಬರಿಯ ಮೇಲ್ಮೈಗೆರೆಗಳಲ್ಲಿ, ಸರಳವಾಗಿ ಮೂಡಿಸಿಕೊಳ್ಳುತ್ತಿದ್ದರು; ಶಿಲ್ಪಿಗಳೂ ಇಂಥ ರೇಖಾಚಿತ್ರಗಳನ್ನು ಬರೆದು ಇರಿಸಿಕೊಳ್ಳುತ್ತಿದ್ದರು. ಮುಂದೆ ಅಚ್ಚುಕಟ್ಟಾಗಿ ಚಿತ್ರವನ್ನೊ ಶಿಲ್ಪವನ್ನೊ ರಚಿಸಲು ಇದು ನೆರವಾಗುವ ಉದ್ದೇಶ. 'ಶ್ರೀತತ್ತ್ವನಿಧಿ'ಯಲ್ಲಿ ಪರಿಪೂರ್ಣವಾಗಿ, ನಾಜೂಕಾಗಿ, ವರ್ಣಮಯವಾಗಿ ಒಡಮೂಡಿಬರುವ ಚಿತ್ರಗಳಿಗೆ ಮೊದಲ ರೇಖಾಚಿತ್ರಗಳನ್ನು (ಕರಡು ಚಿತ್ರಗಳನ್ನು) ವೀರಣ್ಣನ ಮನೆತನದಲ್ಲಿ ಉಳಿದು ಬಂದಿರುವ ಸುರುಳಿಯಲ್ಲಿ ನಾವು ಗಮನಿಸಬಹುದು.

'ಶ್ರೀತತ್ತ್ವನಿಧಿ'ಗೇನೋ ಪ್ರಕಾಶನದ ಪುಣ್ಯ ಇನ್ನೂ ಒದಗಿ ಬಂದಿಲ್ಲ. ಇಂಥ ಅಪೂರ್ವವಾದ, ಸ್ವಾರಸ್ಯವಾದ, ಸುಂದರವಾದ ವಿಶ್ವಕೋಶವೊಂದು ಮೈಸೂರು ಅರಮನೆಯಲ್ಲಿ ನೂರಾರು ವರ್ಷಗಳ ಹಿಂದೆ ಸಿದ್ಧವಾಗಿ ಈವರೆಗೆ ನಮ್ಮ ಗಮನ ಆ ಕಡೆಗೆ ಹರಿಯದಿರುವುದು ಸೋಜಿಗವೆ. ಅದರ ಪ್ರಕಟನೆಯಲ್ಲಿ ಏನೇನು ಅಡಚಣೆಗಳಿವೆಯೊ ನಾನರಿಯೆ; ಆದರೆ ಅದು ಪ್ರಕಟವಾದರೆ ನಮ್ಮ ಕಲಾಸಿರಿಯ ಪರಿಚಯ ಜಗತ್ತಿಗೇ ಆದೀತು ಎಂದೇನೋ ವಿಶ್ವಾಸದಿಂದ ಹೇಳಬಲ್ಲೆ. ಅದು ಹಾಗಿರಲಿ, ಈಗ ವೀರಣ್ಣನ ಮನೆತನದಲ್ಲಿದ್ದ ಚಿತ್ರಸಂಗ್ರಹದ ಸುರುಳಿ ನಮ್ಮ ಗಮನಕ್ಕೆ ಬಂದಿದೆ. 'ಶ್ರೀತತ್ತ್ವನಿಧಿ'ಯ ನಿಧಿಯನ್ನು ಮನವರಿಕೆ ಮಾಡಿಕೊಳ್ಳಲು ಇಣಕುನೋಟವೊಂದು ಇಲ್ಲಿ ದೊರೆತೀತು. ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತು ಈ ಚಿತ್ರಸಂಗ್ರಹದ ಸುರುಳಿಯನ್ನು ದೊರಕಿಸಿಕೊಂಡು, ಅದನ್ನು ಭಾಗಶಃ ಪ್ರಕಟಿಸಲು ತೊಡಗಿರುವುದು ಸಂತೋಷದ ಮಾತು.

2

ಈ ಚಿತ್ರಸಂಗ್ರಹದ ಸುರುಳಿಯನ್ನು ಕುರಿತಂತೆ ನಾಲ್ಕು ಮಾತು. ಮುಮ್ಮಡಿಯವರ ಆಸ್ಥಾನದಲ್ಲಿ ಚಿತ್ರಗಾರರಾಗಿದ್ದ ವೀರಣ್ಣನ ಉಲ್ಲೇಖ ಬಂದಿತಷ್ಟೆ. ಇವರು ಮೊದಲಿಗೆ ವಿಜಯನಗರದ ಅರಸರ ಆಸ್ಥಾನದಲ್ಲಿದ್ದ ಚಿತ್ರಗಾರರೆಂದೂ, ವಿಜಯನಗರ ಸಾಮ್ರಾಜ್ಯ ಕಳೆಗುಂದಿದ ಮೇಲೆ ಹಂಪಿಯಿಂದ ಕಾಲ್ತೆಗೆದು ಮೈಸೂರು ಸೀಮೆಯ ಕಡೆಗೆ ಬಂದರಂತೆ. ಹೀಗೆ ಹಲವಾರು ಚಿತ್ರಗಾರ ಕುಟುಂಬಗಳು ಹಂಪಿಯಿಂದ ಹೊರಟು ಸುತ್ತಮುತ್ತ ರಾಜಾಶ್ರಯವನ್ನೊ ಉದ್ಯೋಗಾವಕಾಶವನ್ನೊ ಅರಸಿ ಅಲ್ಲಲ್ಲಿ ತಿರುಗಾಡಿದರು. ಕೆಲವರು ತಂಜಾವೂರಿಗೆ ಹೋದರು, ಕೆಲವರು ಮೈಸೂರು ಕಡೆಗೆ ಬಂದರು. ಮೈಸೂರು ಕಡೆಗೆ ಬಂದವರು ಶ್ರೀರಂಗಪಟ್ಟಣಕ್ಕೆ ಬಂದುದು ಸಹಜ. ಏಕೆಂದರೆ ವಿಜಯನಗರ ಸಾಮ್ರಾಜ್ಯ ಹಂಪಿಯಲ್ಲಿ ಕೊನೆಗೊಂಡಾಗ, ಅಳಿದುಳಿದ ರಾಜ್ಯದ ತುಣುಕನ್ನು ಶ್ರೀರಂಗರಾಯ ಆಳಲು ಅನುವು ಮಾಡಿಕೊಟ್ಟವರು ಮೈಸೂರು ಸೀಮೆಯ ಒಡೆಯರು; ಶ್ರೀರಂಗರಾಯನನ್ನು ಶ್ರೀರಂಗಪಟ್ಟಣದಲ್ಲಿ ನೆಲೆಗೊಳಿಸಿದವರು ಅವರೇ. ವಿಜಯನಗರದ ಕಡೆಯುಸಿರು ತೋರಿಕೊಂಡದ್ದು ಇಲ್ಲಿಯೆ.

ವಿಜಯನಗರದ ರಾಜಧಾನಿಯಾಗಿದ್ದ ಹಂಪಿಯಿಂದ ಹೊರಹೊರಟ ಚಿತ್ರಗಾರರ ತಂಡದಲ್ಲಿ ವೀರಣ್ಣನ ಕುಟುಂಬವೂ ಒಂದು. ಹೊರ ಹೊರಟವರು ಕನ್ನಡನಾಡಿನ ಪಾಳೆಯಗಾರರ ಆಶ್ರಯವನ್ನು ಬಯಸಿ ಅಲ್ಲಲ್ಲಿ ಸುತ್ತಾಡುವಾಗ ವೀರಣ್ಣನ ಕುಟುಂಬ ಚೆನ್ನರಾಯಪಟ್ಟಣದಲ್ಲಿ ನೆಲೆಸಿತಂತೆ. ಶ್ರೀರಂಗಪಟ್ಟಣದಲ್ಲಿ ಕಾರುಬಾರು ನಡೆಸುತ್ತಿದ್ದ ಹೈದರಾಲಿ, ಟಿಪ್ಪುಸುಲ್ತಾನರಿಗೆ ದಿವಾನರಾಗಿದ್ದ ಪೂರ್ಣಯ್ಯನ ಕಿವಿಗೆ ವೀರಣ್ಣನ ಕಲೆಗಾರಿಕೆಯ ಸುದ್ದಿ ಮುಟ್ಟಿತು. ಶ್ರೀರಂಗಪಟ್ಟಣದಲ್ಲಿ ದರಿಯಾದೌಲತ್ ಅರಮನೆಯನ್ನು ಸಜ್ಜುಗೊಳಿಸುತ್ತಿದ್ದ ಕಾಲ ಅದು. ಅದರಲ್ಲಿ ಭಿತ್ತಿಚಿತ್ರಗಳನ್ನು ಬರೆಸಬೇಕೆಂಬ ಹಂಬಲ ಟಿಪ್ಪುಸುಲ್ತಾನನಿಗೆ ಒದಗಿದಾಗ, ಪೂರ್ಣಯ್ಯ ವೀರಣ್ಣನನ್ನೂ ಮತ್ತೆ ಕೆಲವು ಚಿತ್ರಗಾರರನ್ನೂ ಬರಮಾಡಿಕೊಂಡರು. ಹೀಗೆ ಶ್ರೀರಂಗಪಟ್ಟಣಕ್ಕೆ ವಲಸೆ ಬಂದ ಚಿತ್ರಗಾರ ಕುಟುಂಬದವರು ಸೋಮವಂಶದ ಆರ್ಯಕ್ಷತ್ರಿಯ ಜನಾಂಗದವರು, ತೆಲುಗು ಮಾತನಾಡುವ

ಜನ; ರಾಜುಗಳೆಂಬ ಹೆಸರಿನವರು; ನಿಮಿಷಾಂಬಾದೇವಿಯ ಒಕ್ಕಲು. ಇವರಲ್ಲಿ ವರ್ಣಚಿತ್ರಗಳನ್ನು ರಚಿಸುವ ಚಿತ್ರಗಾರರು ಮಾತ್ರವಲ್ಲದೆ, ಚಿನ್ನ-ಬೆಳ್ಳಿ ಕುಸುರಿ ಕೆಲಸಮಾಡುವ ಚಿತ್ತಾರಿಯವರು, ಜರಿಬಟ್ಟೆಯನ್ನು ತಯಾರಿಸುವ ಸರಿಗೆಯವರು, ನಾಜೂಕಾದ ಮರಗೆಲಸ ಮಾಡುವ ಬಡಿಗೆಯವರು ಮೊದಲಾಗಿ ಬಗೆಬಗೆಯ ಕುಶಲಕರ್ಮಿಗಳಿದ್ದರು. ಇವರ ಉದ್ಯೋಗ ಬಹುಮಟ್ಟಿಗೆ ಶ್ರೀಮಂತರ ಮನೆಗಳಲ್ಲಿ, ಅಧಿಕಾರಿಗಳ ಓಲಗದಲ್ಲಿ, ಊರ ಚಾವಡಿಗಳಲ್ಲಿ, ಗುಡಿ-ಮಠಗಳಲ್ಲಿ. ಇವರು ಶ್ರೀರಂಗಪಟ್ಟಣಕ್ಕೆ ಬಂದು ಅಲ್ಲಿ ಗಂಜಾಂ ಪ್ರದೇಶದಲ್ಲಿ ವಸತಿ ಹೂಡಿ, ಅಲ್ಲಿಯೇ ತಮ್ಮ ಜನಾಂಗದ ಮೂಲಪುರುಷನಾದ ಮುಕ್ತರಾಜನಿಗೊಂದು ಆಲಯವನ್ನೂ ತಮ್ಮ ಕುಲದೇವತೆ ನಿಮಿಷಾಂಬಾದೇವಿಗೆ ಗುಡಿಯನ್ನೂ ಕಟ್ಟಿಕೊಂಡರು.

ಟಿಪ್ಪುಸುಲ್ತಾನನು 1799ರಲ್ಲಿ ಆಂಗ್ಲರಿಂದ ಕೊಲ್ಲಲ್ಪಟ್ಟ ಮೇಲೆ, ಆಂಗ್ಲ ಆಳರಸರು ನಾಡಿನ ಅಧಿಕಾರವನ್ನು ಮೈಸೂರಿನ ಒಡೆಯರ ಮನೆತನಕ್ಕೆ ಹಿಂದಿರುಗಿಸಿ, ರಾಜಧಾನಿಯನ್ನು ಶ್ರೀರಂಗಪಟ್ಟಣದಿಂದ ಮೈಸೂರಿಗೆ ಮತ್ತೆ ಬದಲಿಸಿದರು. ಮೈಸೂರಿನಲ್ಲಿ ಪಟ್ಟಕ್ಕೆ ಬಂದವರು ಮುಮ್ಮಡಿ ಕೃಷ್ಣರಾಜ ಒಡೆಯರು. ರಾಜಯೋಗ್ಯವಾದ ಅರಮನೆಯೊಂದನ್ನು ಕಟ್ಟುವ ಸನ್ನಾಹವೂ ಆಗಲೆ ಮೊದಲಾಯಿತು. ಒಡೆಯರು ಇನ್ನೂ ಆರು ವರ್ಷದ ಹುಡುಗನಾಗಿದ್ದುದರಿಂದ, ಆಡಳಿತವೆಲ್ಲ ದಿವಾನ್ ಪೂರ್ಣಯ್ಯನದೆ. ಹೊಸ ಅರಮನೆಯ ಅಲಂಕರಣಕ್ಕೆಂದು ಚಿತ್ರಗಾರರನ್ನು ಶ್ರೀರಂಗಪಟ್ಟಣದಿಂದ ಮೈಸೂರಿಗೆ ಕರೆಸಿಕೊಂಡರು. ಆಗ ವೀರಣ್ಣನ ಕುಟುಂಬವೂ ಮೈಸೂರನ್ನು ಸೇರಿತು. ವೀರಣ್ಣನೊಂದಿಗೆ ಅವನ ಸೋದರ ಯಲ್ಲಯ್ಯನೆಂಬುವನೂ ಮೈಸೂರಿಗೆ ಬಂದ. ಬರುಬರುತ್ತ ವೀರಣ್ಣ ಅರಸರ ಆಪ್ತವರ್ಗದಲ್ಲಿ ಸೇರಿದ. ಅರಸರು 'ಶ್ರೀತತ್ತ್ವನಿಧಿ'ಯನ್ನು ಸಿದ್ಧಗೊಳಿಸಲು ಸಂಕಲ್ಪಿಸಿದಾಗ ವೀರಣ್ಣನ ನೆರವನ್ನು ಬಯಸಿದುದು ಸಹಜವೆ.

ಈ ವೀರಣ್ಣನ ವಂಶದವರೆ ಆದ ಶ್ರೀ ವೈ. ಸುಬ್ರಹ್ಮಣ್ಯರಾಜು ಅವರ ವಶದಲ್ಲಿರುವ ಚಿತ್ರಸಂಗ್ರಹದ ಸುರುಳಿಯೆ ಕರ್ನಾಟಕ ಚಿತ್ರಕಲಾ ಪರಿಷತ್ತಿಗೆ ದೊರಕಿರುವುದು. ಈ ಸುರುಳಿಯು ವೀರಣ್ಣನ ಕಾಲದಿಂದ ಆ ಮನೆತನದಲ್ಲಿ ಬಂದಿದೆಯೆಂದು ಹೇಳುತ್ತಾರೆ. ವೀರಣ್ಣನ ಮಗ ಯಲ್ಲಯ್ಯನೂ ಮುಮ್ಮಡಿಯವರ ಓಲಗದಲ್ಲೆ ಇದ್ದ ಚಿತ್ರಗಾರ. ಯಲ್ಲಯ್ಯನ ಮೊಮ್ಮಗ ಸುಂದರಯ್ಯ ಚಾಮರಾಜ ಒಡೆಯರ ಕಾಲದಲ್ಲಿ ಅರಮನೆಯ ಕೆಲಸದಲ್ಲಿದ್ದರು. ಸುಂದರಯ್ಯನ ಮಗ ಯಲ್ಲಪ್ಪ ಎಂಬುವರ ಎರಡನೆಯ ಮಗನೇ ಸುಬ್ರಹ್ಮಣ್ಯರಾಜು (ಜನನ 1907). ಇವರೂ ಮೈಸೂರು ಅರಮನೆಯಲ್ಲೆ ಚಿತ್ರಗಾರರಾಗಿದ್ದವರು (ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ); ಅನಂತರ ಬೆಂಗಳೂರಿಗೆ ಬಂದು ನೆಲೆಸಿ, ಈಗ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಅಧ್ಯಾಪಕರಾಗಿದ್ದಾರೆ. ಹೀಗಾಗಿ ಅವರ ಬಳಿಯಿದ್ದ ಹಳೆಯ ಚಿತ್ರಸಂಗ್ರಹದ ಸುರುಳಿಯ ಪರಿಚಯ ಪರಿಷತ್ತಿಗೆ ಒದಗಿಬರುವುದು ಸಾಧ್ಯವಾಯಿತು.

3

ಈ ಚಿತ್ರಸಂಗ್ರಹದ ಸುರುಳಿಯ ಸ್ವಾರಸ್ಯ ಅಲ್ಲಿರುವ ರೇಖಾಚಿತ್ರಗಳಲ್ಲಿ ಕಾಣಸಿಗುವ ಸರಳ ನಿರೂಪಣೆ. ಈ ಚಿತ್ರಗಳನ್ನು ಸಿದ್ಧಪಡಿಸಿದವರು ಯಾರು ಎಂಬುದು ತಿಳಿಯ ಬರುವುದಿಲ್ಲ; ಅವು ಸಿದ್ಧವಾದ ಕಾಲ ಯಾವುದು ಎಂಬುದೂ ತಿಳಿಯುವಂತಿಲ್ಲ. ಶ್ರೀ ಸುಬ್ರಹ್ಮಣ್ಯರಾಜು ಅವರ ಹಿರಿಯರು ಎಂದಷ್ಟು ಮಾತ್ರ ತಿಳಿಯುತ್ತದೆ; ಕೆಲವಾರು ತಲೆಮಾರುಗಳಿಂದ ಈ ಸುರುಳಿ ಅವರ ಮನೆತನದಲ್ಲಿ ಉಳಿದುಬಂದಿದೆಯೆಂದೂ ಹೇಳುತ್ತಾರೆ. ಚಿತ್ರಗಳ ಶೈಲಿಯನ್ನೂ ವಸ್ತುವನ್ನೂ ಕ್ರಮವನ್ನೂ ಗಮನಿಸಿದರೆ ಅವುಗಳಿಗೂ 'ಶ್ರೀತತ್ತ್ವನಿಧಿ'ಗೂ ಇರುವ ನಂಟು ಸ್ಪಷ್ಟವಾಗುತ್ತದೆ. ಇಲ್ಲಿರುವ ಚಿತ್ರಗಳು ದೇವತಾಮೂರ್ತಿಗಳು. ಪುರಾಣ, ಆಗಮ, ಶಿಲ್ಪಶಾಸ್ತ್ರಗಳಲ್ಲಿರುವ ಒಕ್ಕಣೆ, ಧ್ಯಾನಶ್ಲೋಕ ಮೊದಲಾದ ವಿವರಗಳನ್ನನುಸರಿಸಿ ಚಿತ್ರಗಾರರು ತಮ್ಮ ಸ್ವಂತ ಪ್ರಯೋಜನಕ್ಕಾಗಿ ಮಾಡಿಕೊಂಡಿರುವ ಚಿತ್ರಗಳು. ಚಿತ್ರಗಳ ಮೇಲ್ಭಾಗದಲ್ಲಿ ಆಯಾ ದೇವತೆಗಳ ಹೆಸರುಗಳನ್ನು ಕಾಣಿಸಿದ್ದಾರೆ - ಚಿತ್ರಗಳಲ್ಲಿ ಕೂಡಿಬರಬೇಕಾದ ಬಣ್ಣದ ಸೂಚನೆಯನ್ನೂ ನಮೂದಿಸಿದ್ದಾರೆ. ಈ ಬರಹಗಳು ಕನ್ನಡ ಲಿಪಿಯಲ್ಲೆ, ಕನ್ನಡ ಭಾಷೆಯಲ್ಲೆ ಇವೆ. ಲಿಪಿಯ ಕಾಲವನ್ನು ಗುರುತಿಸಬಹುದಾದರೆ ಮುಮ್ಮಡಿಯವರ ಕಾಲಕ್ಕೆ ಸಲ್ಲಬಹುದು. ಸುರುಳಿಯ ಕಾಗದವೂ ಇದೇ ಕಾಲದ್ದೆನ್ನಬಹುದು.

ಮೊದಲೆ ಸೂಚಿಸಿದಂತೆ, ಈ ರೇಖಾಚಿತ್ರಗಳು ಚಿತ್ರಗಾರನು ತಾನೆ ಮುಂದೆ ವರ್ಣಚಿತ್ರಗಳನ್ನು ರಚಿಸುವಾಗ ನೆರವಾಗಲೆಂದು ಮಾಡಿಕೊಂಡ ಕರಡುಗಳು, ಟಿಪ್ಪಣಿಗಳು. ಯಾವನೊಬ್ಬ ಬರಹಗಾರ ತನ್ನ ಗ್ರಂಥರಚನೆಗಾಗಿ ಮೊದಲೆ ಮಾಡಿಕೊಳ್ಳುವ ಟಿಪ್ಪಣಿಗಳಂತೆ, ಚೌಕಟ್ಟಿನ ನಿರೂಪಣೆಯಂತೆ. ಮೂರ್ತಿಯ ಮುಖ್ಯ ವಿವರಗಳನ್ನು ಮಾತ್ರ ಇಲ್ಲಿ ಗುರುತಿಸಿಕೊಳ್ಳಲಾಗಿದೆ; ಕೈಗಳೆಷ್ಟು, ಆಯುಧಗಳು ಯಾವುವು, ಭಂಗಿ ಯಾವುದು ಇತ್ಯಾದಿ. ಅಲಂಕರಣದ ಕಡೆ ಅಷ್ಟಾಗಿ ಗಮನವಿರದು. ಈ ಚಿತ್ರಗಳು ಯಾವುವೂ ಪರಿಪೂರ್ಣವಾದ, ನಾಜೂಕಾದ ಕೃತಿಗಳೆನ್ನುವ ಹಾಗಿಲ್ಲ; ಅವನ್ನು ಬೇರೆಯವರಿಗೆ ತೋರಿಸಬೇಕೆಂಬ ಉದ್ದೇಶ ಚಿತ್ರಗಾರರಿಗೆ ಇದ್ದಿರಲಾರದು. ತಮ್ಮ ಸ್ವಂತ ಪ್ರಯೋಜನಕ್ಕಾಗಿ ಮಾಡಿಕೊಂಡವು.

ಆದರೆ ಕಲೆಯ ದೃಷ್ಟಿಯಿಂದ ಈ ಚಿತ್ರಗಳು ಸೊಗಯಿಸುತ್ತವೆ. ಇವೆಲ್ಲ ಬರಿಯ ರೇಖಾಚಿತ್ರಗಳು. ಗೆರೆಗಳು ಮೂಡಿಕೊಂಡಿರುವ ಬಗೆಯಲ್ಲಿ ಕಲೆಗಾರಿಕೆ ಎದ್ದುಕಾಣುತ್ತದೆ. ದಿಟ್ಟವಾದ, ಖಚಿತವಾದ ಗೆರೆಗಳು; ಅವುಗಳ ಓಟ ಪ್ರೌಢವಾದ ಕೈಯನ್ನು ಕಾಣಿಸುತ್ತದೆ. ಚಿತ್ರಗಾರನು ಕೆಲವೆ

ಕ್ಷಣಗಳಲ್ಲಿ, ಕೆಲವೆ ಗೆರೆಗಳಲ್ಲಿ ದೇವತಾಮೂರ್ತಿಯ ಆಕಾರವನ್ನು ಕಣ್ಣಿಗೆ ಕಟ್ಟುವಂತೆ ಬಿಡಿಸಿದ್ದಾನೆ. ರೇಖೆಗಳು ಕೆಲವೆ ಆದರೂ ಅವುಗಳ ದಾರ್ಢ್ಯ, ನಿರ್ಧಾರ, ಚೆಲುವು ಇವು ತುಂಬಿಬಂದಿವೆ. 'ರೇಖಾಂ ಪ್ರಶಂಸಂತಿ ಆಚಾರ್ಯಾಃ' ಎಂದು ನಮ್ಮ ಹಳೆಯ ಚಿತ್ರಲಕ್ಷಣ ಗ್ರಂಥಗಳಲ್ಲಿ ಒಕ್ಕಣೆಯಿದೆಯಷ್ಟೆ. ಈ ಮಾತಿನ ನಿದರ್ಶನವನ್ನು ನಾವಿಲ್ಲಿ ಕಂಡುಕೊಳ್ಳಬಹುದು. ಚಿತ್ರದ ಚೌಕಟ್ಟೇನೊ ಸಾಂಪ್ರದಾಯಿಕವೆ, ವಿಷಯ ದೇವತಾಮೂರ್ತಿಗಳೆ. ಆದರೆ ಚಿತ್ರಗಾರನ ಸ್ವಾತಂತ್ರ್ಯಕ್ಕೇನು ಊನವಿರದು. ಅವನು ತೋರಿಸಿರುವ ಜಾಣ್ಮೆ, ಬಳಸಿರುವ ತಂತ್ರ, ಅನುಸರಿಸಿರುವ ಪದ್ಧತಿ ಇವೆಲ್ಲ ಕಲೆಗಾರಿಕೆಯ ಸೊಗಸನ್ನು ಹೊರಸೂಸುವಂಥವೆ.

ಬರಿಯ ಗೆರೆಗಳಲ್ಲಿ ಅವನು ತೋರಿಸಿರುವ ಪ್ರೌಢಿಮೆಯನ್ನು ಗಮನಿಸಬಹುದು. 'ಶ್ರೀತತ್ತ್ವನಿಧಿ'ಯಲ್ಲಿ ನಾವು ಕಾಣುವ ಚಿತ್ರಗಳು ಇದೇ ಗೋತ್ರಕ್ಕೆ ಸೇರಿದ್ದರೂ, ಅಲ್ಲಿ ಬಣ್ಣ-ಅಲಂಕರಣಗಳು ಸೇರಿವೆ; ಅಲ್ಲಿನ ಕೆಲಸ ತುಂಬ ನಾಜೂಕಾದುದು, ಅಚ್ಚುಕಟ್ಟಾದುದು; ಶ್ರಮವಹಿಸಿ ಮಾಡಿದ ಚಿತ್ರಗಳು, ಅರಸರ ಚಿತ್ತಕ್ಕೆ ಬರಲೆಂಬ ಹಂಬಲದಿಂದ ಮಾಡಿದುವು. ಇಲ್ಲಿ ಹಾಗಲ್ಲ, ಚಿತ್ರಗಾರ ತನಗಾಗಿ, ಸರಳವಾಗಿ ಗುರುತುಮಾಡಿಕೊಂಡ ಚಿತ್ರಗಳು; ಇಲ್ಲಿ ಶ್ರಮವೂ ಕಾಣುವುದಿಲ್ಲ, ಬೇರೆಯವರನ್ನು ಮೆಚ್ಚಿಸುವ ಹಂಬಲವೂ ಇಲ್ಲ. ಕಲಾಕೃತಿ ತಾನೆ ತಾನಾಗಿ, ಪಳಗಿದ ಕೈಯಿಂದ ಹರಿದುಬಂದಿದೆ. ಚಿತ್ರಗಾರನ ಚೇತನದ ಸಂಸ್ಕಾರ ಯಾವೊಂದು ಕೃತಕತೆಯ ಹೊರೆಯಿಲ್ಲದೆ, ಅಗತ್ಯದ ಕಾವಿಲ್ಲದೆ, ಆಳರಸರ ಅಂಜಿಕೆಯಿಲ್ಲದೆ ಹೊರಹೊಮ್ಮಿದೆ. ಕಲೆಯ ದೃಷ್ಟಿಯಿಂದ, ಇಲ್ಲಿನ ಕರಡು ರೇಖಾಚಿತ್ರಗಳು 'ಶ್ರೀತತ್ತ್ವನಿಧಿ'ಯ ಪರಿಪೂರ್ಣ ವರ್ಣಚಿತ್ರಗಳಿಗಿಂತ ಒಂದು ಪಟ್ಟು ಮಿಗಿಲಾಗಿದೆ. ಇಲ್ಲಿನ ಸರಳ ಸೌಂದರ್ಯ ಅಲ್ಲಿ ಆಡಂಬರದ ಅಲಂಕಾರದಲ್ಲಿ ಕಣ್ಮರೆಯಾದಂತೆ ತೋರುತ್ತದೆ.

ಚಿತ್ರಕಲೆಯಾಗಲಿ ಶಿಲ್ಪವಾಗಲಿ ವಾಸ್ತುವಾಗಲಿ ಮೊದಲು ರೇಖಾಚಿತ್ರವಾಗಿಯೆ ಮೂಡಿಕೊಳ್ಳಬೇಕು. ಕಲಾವಿದನ ಕಾಣ್ಕೆಯೊ ಕಲ್ಪನೆಯೊ ಮೈದುಂಬಿಕೊಂಡು ಬರುವುದು ಸಹಜವಾಗಿ ಮೂಡಿಕೊಳ್ಳುವ ಗೆರೆಗಳಲ್ಲಿಯೆ. ರೇಖಾಚಿತ್ರದ ಬುನಾದಿಯ ಮೇಲೆ, ಮುಂದೆ ಅದನ್ನು ಅನುಕೂಲವಾದ ಮಾಧ್ಯಮದಲ್ಲಿ ನೇರಪಡಿಸಿ ನಯಗೊಳಿಸಿ, ನೋಡುವ ನಾಲ್ಕು ಜನ ಮೆಚ್ಚುವಂತೆ ಮಾಡುವಾಗ ಮಾಧ್ಯಮದ ಬಿಕ್ಕಟ್ಟು, ಪರಿಕರಗಳ ಇತಿಮಿತಿ, ರಸಿಕರ ನಿರೀಕ್ಷೆಯ ಒತ್ತಡ, ಸಂದರ್ಭದ ಅಗತ್ಯ, ಸಂವಿಧಾನದ ಕಟ್ಟುಪಾಡು ಇವೆಲ್ಲ ಕಲಾವಿದನ ಕೈಕಟ್ಟುತ್ತವೆ. ಅವನ ಸ್ವಾತಂತ್ರ್ಯವನ್ನು ಅಷ್ಟಿಷ್ಟು ಮೊಟಕುಮಾಡುತ್ತವೆ. ಮೊದಲ ರೇಖಾಚಿತ್ರದಲ್ಲಿರುವ ಸರಳ ಸೌಂದರ್ಯ ಮರೆಯಾಗುತ್ತದೆ.

ಇದು ಜಗತ್ತಿನ ಪ್ರಸಿದ್ಧ ಕಲಾವಿದರ ಕೃತಿಗಳ ವಿಚಾರವಾಗಿಯೂ ಹೇಳಬಹುದಾದ ಮಾತು. ಲಿಯೊನಾರ್ಡೊ ದ ವಿಂಚಿ, ಡ್ಯೂರೆರ್, ರೆಂಬ್ರಾಂಟ್, ಬ್ರ್ಯುಗೆಲ್, ಕ್ಲೊಉ ಮೊದಲಾದ ಹೆಸರಾಂತ ಕಲಾವಿದರು ತಮ್ಮ ಕೆಲವು ಜಗದ್ವಿಖ್ಯಾತ ಕೃತಿಗಳಿಗೆ ಮೊದಲಲ್ಲಿ ಮಾಡಿಕೊಂಡ ಕರಡು ರೇಖಾಚಿತ್ರಗಳ ಸಂಕಲನವೊಂದನ್ನು ಹರ್ವರ್ಡ್ ವಿಶ್ವವಿದ್ಯಾನಿಲಯದ ಪಾಲ್ ಸಾಖ್ಸ್ 1951ರಲ್ಲಿ ಪ್ರಕಟಿಸಿದಾಗ (Pocket Book of Great Drawings, New York) ಇದು ಸ್ಪಷ್ಟವಾಯಿತು. ಕಲಾವಿಮರ್ಶಕರು ಈ ರೇಖಾಚಿತ್ರಗಳನ್ನು ನೋಡಿ ಅಚ್ಚರಿಗೊಂಡರು. ಜಗತ್ತಿಗೆ ಚಿರಪರಿಚಿತವಾದ, ಎಲ್ಲರ ಮೆಚ್ಚುಗೆಗೆ ಪಾತ್ರವಾದ, ಕಲಾವಿದರ ಪೀಳಿಗೆಗಳ ಅಭ್ಯಾಸಕ್ಕೆ ಅನುಕರಣೆಗೆ ಯೋಗ್ಯವಾದ ಪರಿಪೂರ್ಣ ವರ್ಣಚಿತ್ರಗಳಿಗಿಂತ ಅವುಗಳ ಹಿನ್ನೆಲೆಯಲ್ಲಿದ್ದ ರೇಖಾಚಿತ್ರಗಳ ಸೊಬಗು ಹೆಚ್ಚಾಗಿರುವ ಅನುಭವ ಒದಗಿಬಂದಿತು. ಹದಿನಾರನೆಯ ಶತಮಾನದ ಸುಪ್ರಸಿದ್ಧ ಕಲಾಭಿಜ್ಞ ವಸಾರಿ 'ಕಲೆಯಲ್ಲಿ ಎಲ್ಲಕ್ಕೂ ಬುನಾದಿಯೆಂದರೆ ರೇಖಾಚಿತ್ರವೆ' ಎಂದು ಹೇಳಿ ಅದರಲ್ಲಿರುವ ಪ್ರೌಢಿಮೆ, ಸ್ವಾತಂತ್ರ್ಯ, ಸೊಗಸುಗಳನ್ನು ಬಣ್ಣಿಸಿದ್ದಾನೆ.

ನಮ್ಮ ನಾಡಿನ ಸಾಂಪ್ರದಾಯಿಕ ಚಿತ್ರಕಲೆಯಲ್ಲಂತೂ ರೇಖಾಚಿತ್ರಗಳಿಗೇ ಅಗ್ರಪಟ್ಟ. ಕಾಗದದ ಮೇಲಾಗಲಿ, ಗೋಡೆಯ ಮೇಲಾಗಲಿ, ತಾಳಪತ್ರವಾಗಲಿ, ಭೂರ್ಜ ಪತ್ರವಾಗಲಿ, ಕಿರುಚಿತ್ರವಾಗಲಿ, ದೊಡ್ಡ ಪ್ರಮಾಣದಲ್ಲಾಗಲಿ ವರ್ಣಚಿತ್ರವೆಂದು ಬಣ್ಣ ತುಂಬಿದಾಗಲೂ ರೇಖೆಗಳು ಕಾಣುತ್ತಲೆ ಇರಬೇಕೆಂದು ವಿಧಿ. ಮೊದಲಗೆರೆಗಳು ಮರೆಯಾಗಬಾರದು; ಚಿತ್ರಣ ಮುಗಿದ ಮೇಲೆ ಅವು ಇನ್ನಷ್ಟು ಸ್ಪಷ್ಟವಾಗಿ ಕಾಣಿಸಿಕೊಳ್ಳಬೇಕು. ಇದನ್ನು ಅಜಂಟ, ಸೀಗಿರಿಯ, ಶಿತ್ತನ್ನವಾಶಲ್ ಮೊದಲಾದ ಚಿತ್ರಕಲಾಕ್ಷೇತ್ರಗಳಲ್ಲಿ ಗುರುತಿಸಬಹುದು. ರೇಖಾಚಿತ್ರದ ಹೆಗ್ಗಳಿಕೆ ನಾಡಿನ ಎಲ್ಲ ಶೈಲಿಗಳಲ್ಲಿಯೂ ಉಳಿದುಬಂದಿದೆ, ಬೆಳೆದುಬಂದಿದೆ. ಮೈಸೂರು ಅರಮನೆಯಲ್ಲಿ ಸಿದ್ಧವಾದ ಚಿತ್ರಗಳೂ ಈ ನಿಯಮಕ್ಕೆ ಅಪವಾದವಲ್ಲ.

4

ಮೈಸೂರು ಅರಮನೆಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಬೆಳೆದುಬಂದ ಚಿತ್ರಕಲಾ ಶೈಲಿಗೆ ಮೂಲ ಯಾವುದು? ಚಿತ್ರಗಾರ ವೀರಣ್ಣನ ಮನೆತನದಲ್ಲಿ ಉಳಿದುಬಂದಿರುವ ರೇಖಾಚಿತ್ರಗಳ ಸಂಗ್ರಹವನ್ನು ಎದುರಿಗೆ ಇರಿಸಿಕೊಂಡಾಗ ಈ ಪ್ರಶ್ನೆ ಪ್ರಸಕ್ತವಾಗುತ್ತದೆ. ನೆರೆನಾಡಾದ ತಂಜಾವೂರಿನಲ್ಲಿ ಬೆಳೆದ ಚಿತ್ರಕಲಾಶೈಲಿಯೊಂದಿಗೆ ಮೈಸೂರಿನ ಶೈಲಿಯನ್ನು ಹೋಲಿಸುವಾಗಲೂ ಇದು ಪ್ರಸ್ತುತವಾಗುತ್ತದೆ. ವಿಜಯನಗರ ಸಾಮ್ರಾಜ್ಯ ಪ್ರಬಲವಾಗಿದ್ದಾಗ ಅಲ್ಲಿ ಮೈದಳೆದು ಬೆಳೆದ ಚಿತ್ರಕಲಾಶೈಲಿಯ ಪ್ರಭಾವ ತಂಜಾವೂರು ನಾಯಕರ ಓಲಗದಲ್ಲೂ ಮೈಸೂರು ಅರಸರ ಓಲಗದಲ್ಲೂ ಬೆಳೆದ ಶೈಲಿಗಳಲ್ಲಿ ಕಾಣಬರುವುದೇನೋ ದಿಟವೆ. ಆದರೆ ಅಲ್ಲಿ ಆ ಶೈಲಿ ಮೈದಳೆದದ್ದಕ್ಕೂ ಒಂದು ಹಿನ್ನಲೆ ಇರಬೇಕಲ್ಲ? ಇತಿಹಾಸದ ಎಳೆಗಳಲ್ಲಿ ತಡುಕಾಡಿದರೆ, ಮುಗಲ್ ಚಿತ್ರಕಲೆಯ ಪ್ರಭಾವವನ್ನು ವಿಜಯನಗರದ ಚಿತ್ರಕಲಾ ಶೈಲಿಯಲ್ಲಿ ಗುರುತಿಸಬಹುದು. ಮುಗಲ್ ಚಿತ್ರಕಲೆ ನಮ್ಮ ನಾಡಿನಲ್ಲಿ ಬೆಳೆಯುವಾಗ ಪರ್ಶಿಯನ್ ಶೈಲಿಯನ್ನು ಅರಗಿಸಿಕೊಂಡ ಪ್ರಾದೇಶಿಕ ಶೈಲಿಯ ಪಾತ್ರ ದೊಡ್ಡದು.

ಸಾಂಪ್ರದಾಯಿಕ ಚಿತ್ರಕಲೆ ನಡೆದುಬಂದ ದಾರಿಯನ್ನು ಗುರುತಿಸುವಾಗ ಅಜಂಟ (ಕ್ರಿಸ್ತಪೂರ್ವ ಯುಗಗಳಿಂದ ಕ್ರಿಸ್ತಾಬ್ದ ಎರಡನೆಯ ಶತಮಾನದವರೆಗೆ), ಸೀಗಿರಿಯ (ಐದನೆಯ ಶತಮಾನ), ಬಂಗಾಳದ ಪಾಲ ಪದ್ಧತಿಯ ಕಿರುಚಿತ್ರಗಳು (ಎಂಟನೆಯ ಶತಮಾನದಿಂದ ಹನ್ನೆರಡನೆಯ ಶತಮಾನದವರೆಗೆ), ಗುಜರಾತಿನ ವೈಷ್ಣವ ಮತ್ತು ಜೈನ ತಾಡಓಲೆ ಗ್ರಂಥದ ಚಿತ್ರಗಳು (ಹನ್ನೊಂದನೆಯ ಶತಮಾನದಿಂದ ಹದಿನೈದನೆಯ ಶತಮಾನದವರೆಗೆ) ಮುಂತಾದ ಪ್ರಾಚೀನ ವಿವರಗಳಲ್ಲೆ ಸಾಂಪ್ರಾದಾಯಿಕ ಶೈಲಿ ಸಿದ್ಧವಾದುದನ್ನು, ಬಲಗೊಂಡುದನ್ನು ಕಾಣಬಹುದು. ಅದರ ಹಿನ್ನೆಲೆಯನ್ನು ಬೇರೆಡೆ ವಿವೇಚಿಸಿದ್ದೇನೆ. ಇಲ್ಲಿ ನಾವು ಗಮನಿಸಬೇಕಾದುದು ಅತಿ ಹಳೆಯದೆಂಬ ಅಜಂಟ ವರ್ಣಚಿತ್ರಗಳಲ್ಲೆ ಕಾಣಬರುವ ರೇಖೆಗಳ ಹೆಗ್ಗಳಿಕೆ; ಇದು ಸಂಪ್ರದಾಯದಲ್ಲಿ ಮುಂದುವರೆಯಿತು. ಚಿತ್ರಗಾರನು ಇಲ್ಲಿ ಮುಖ್ಯವಾಗಿ ರೇಖಾಚಿತ್ರವನ್ನೆ ಉದ್ದೇಶಿಸಿರುವುದು. ರೇಖೆಯು ನಿಖರವಾಗಿ, ನವುರಾಗಿ ಹರಿಯುವಂತಿರುತ್ತದೆ. ಬಯಸಿದ ಆಕೃತಿ ರೇಖೆಗಳಿಂದಲೇ ಸಿದ್ಧವಾಗಿ, ಅಷ್ಟರಿಂದಲೆ ಎದ್ದು ಕಾಣುವುದಾದರೂ, ಆಕೃತಿಯ ಚೆಲುವನ್ನು ಹೆಚ್ಚಿಸಲು ಬಣ್ಣಗಳ ಬಳಕೆ, ಬಣ್ಣಗಳ ಪಾತ್ರ ಗೌಣ; ರೇಖೆಗಳದ್ದು ಪ್ರಧಾನ.

ಅಜಂಟದಲ್ಲಾಗಲಿ ಬಾಗ್, ಸೀಗಿರಿಯ, ಶಿತ್ತನ್ನವಾಸಲ್‌ಗಳಲ್ಲಾಗಲಿ ಚಿತ್ರಗಳ ಪ್ರಮಾಣ ದೊಡ್ಡದೆ ಆದುದರಿಂದ ರೇಖೆಗಳ ವಿನ್ಯಾಸದಲ್ಲಿ, ರೇಖಾಕೃತಿಗಳ ನಿರ್ವಹಣೆಯಲ್ಲಿ ಹಿಡಿತ ಸ್ವಲ್ಪಮಟ್ಟಿಗೆ ತಪ್ಪುವಂತಿದೆ. ಪಾಲ ಶೈಲಿಯಲ್ಲಿ ಕಿರುಚಿತ್ರಗಳ ಬಳಕೆ ಮೊದಲಾದಾಗ ರೇಖಾಚಿತ್ರದ ಸ್ವಾರಸ್ಯ ಇನ್ನಷ್ಟು ಹೆಚ್ಚಿತು. ಈ ಶೈಲಿಯಲ್ಲಿ ಪ್ರಸಿದ್ಧ ಚಿತ್ರಗಾರ ಧೀಮಾನ ಮತ್ತು ಅವನ ಮಗ ಭಿಟ್‌ಪಾಲೊ ಇವರಿಬ್ಬರೂ ಚಿತ್ರಗಾರರು ಮಾತ್ರವಲ್ಲದೆ ಶಿಲ್ಪಿಗಳೂ ಹೌದು, ಲೋಹದ ಕೆಲಸದಲ್ಲಿ ಕುಶಲರೂ ಹೌದು. ಶಿಲ್ಪಕ್ಕೆ ನೆರವಾಗುವಂತೆ ರೇಖಾಚಿತ್ರಗಳನ್ನು ಸಿದ್ಧಪಡಿಸುವಾಗ ಬಣ್ಣ ಗೌಣವೆ. ರೇಖೆಗಳಲ್ಲಿ ಗಾಂಭೀರ್ಯ, ಚೆಲುವು ಮುಖ್ಯವಾದ ವಿವರಗಳು; ಮುಖದ ಭಂಗಿ, ಮುದ್ರೆ, ಅಂಗಾಂಗಗಳ ವಿನ್ಯಾಸ, ಅಲಂಕರಣ ಇವುಗಳ ಪಾತ್ರ ಹೆಚ್ಚಿನದು. ಅಲ್ಲಿಂದ ಮುಂದೆ ದೇವತಾಚಿತ್ರಗಳನ್ನೊ, ಪುರಾಣ ಪ್ರಸಂಗಗಳನ್ನೊ ಚಿತ್ರಿಸುವಾಗ ರೇಖೆಗಳಲ್ಲಿ ಮೂರ್ತಿರೂಪ ಮಾತ್ರವಲ್ಲದೆ ಭಾವ, ಭಂಗಿ, ಕ್ರಿಯೆ, ಲೀಲೆ, ಸಂದರ್ಭ, ಆಯುಧ, ಪರಿಸರ ಮೊದಲಾದ ವಿವರಗಳೂ ಕಾಣಬೇಕೆಂಬ ತವಕ ಸಾಂಪ್ರದಾಯಿಕ ಚಿತ್ರಗಾರರಿಗೆ ಒದಗಿದುದು ಸಹಜವೆ.

ಈ ಚೌಕಟ್ಟಿನಲ್ಲಿ ಮೊಟ್ಟಮೊದಲು ಒದಗಿದ ಹೊರಗಣ ಪ್ರಭಾವವೆಂದರೆ ಇರಾನಿಯನ್-ಪರ್ಶಿಯನ್ ಚಿತ್ರಕಲಾ ಪದ್ಧತಿಯದು. ಮುಗಲ್ ಸಾಮ್ರಾಟ ಹುಮಾಯುನ್ (1530-1556) ಮೀರ್ ಸೈಯದಾಲಿ ಮತ್ತು ಕ್ವಾಜಾ ಅಬ್ದುಸ್ ಸಮದ್ ಎಂಬಿಬ್ಬರು ಚಿತ್ರಗಾರರನ್ನು ನಮ್ಮ ದೇಶಕ್ಕೆ ಕರೆತಂದುದು ಈ ಪ್ರಭಾವಕ್ಕೆ ಮೂಲವಾಯಿತು. ಹುಮಾಯುನನ ಮಗ ಅಕ್ಬರ್ (1556-1605)ನಿಗೆ ಚಿತ್ರಕಲೆಯಲ್ಲಿ ತುಂಬ ಆಸಕ್ತಿ. ಚಿಕ್ಕಂದಿನಲ್ಲಿ ಅವನು ಅಬ್ದುಸ್ ಸಮದನ ಬಳಿ ಚಿತ್ರಕಲೆಯನ್ನು ಕಲಿತದ್ದೂ ಉಂಟು. ಅವನು ಸುಲ್ತಾನನಾದ ಮೇಲೆ ಅವನ ಓಲಗದಲ್ಲಿ ಒಂದುನೂರ ಐವತ್ತು ಮಂದಿ ಚಿತ್ರಗಾರರಿದ್ದರಂತೆ. ಅವರಲ್ಲಿ ಬಹುಮಂದಿ ಹಿಂದುಗಳು; ಬಸಾವಾನ್, ದಸ್ವಾನಾಥ್, ಕೇಸು (ಕೇಶವ), ಮಾಧೊ (ಮಾಧವ), ಮುಸ್ಕೀನ್, ರಾಮದಾಸ್, ಮುಕುಂದ್, ಭಗವತಿ ಮುಂತಾದ ಚಿತ್ರಗಾರರಿಗೆ ಉತ್ತೇಜನ ನೀಡಿದ ಉಲ್ಲೇಖವಿದೆ. ಇವರೆಲ್ಲ ಸಾಂಪ್ರದಾಯಿಕ ಕಲೆಯಲ್ಲಿ ನುರಿತಿದ್ದವರು. ಈಗ ಪರ್ಶಿಯನ್ ಶೈಲಿಯನ್ನು ಅರಗಿಸಿಕೊಂಡರು. ಅಕ್ಬರನ ಕಾಲದಲ್ಲಿ ಪರ್ಶಿಯನ್ ಪ್ರಭಾವವನ್ನು ತಳೆದ ಕಿರುಚಿತ್ರಗಳು, ವ್ಯಕ್ತಿಚಿತ್ರಗಳು, ಪ್ರಕೃತಿ ಚಿತ್ರಣ ಜನಪ್ರಿಯವಾದುವು. ಅಕ್ಬರನ ಆಸ್ಥಾನಕ್ಕೆ ಜೆಸ್ಯೂಟ್ ಪಾದ್ರಿಗಳು ಬಂದು, ಅರಸನಿಗೆ ಉಡುಗೊರೆಯಾಗಿ ಕ್ರೈಸ್ತಧರ್ಮದ ಐರೋಪ್ಯ ಚಿತ್ರಗಳನ್ನು ನೀಡಿದಾಗ, ಅಕ್ಬರನು ಅವನ್ನು ಮೆಚ್ಚಿಕೊಂಡು ಅವುಗಳ ನಕಲುಗಳನ್ನು ಸಿದ್ಧಪಡಿಸುವಂತೆ ತನ್ನ ಓಲಗದ ಕಲಾವಿದರನ್ನು ತೊಡಗಿಸಿದನಂತೆ.

ಮುಗಲ್ ಕಾರುಬಾರಿನ ಪ್ರಭಾವದಿಂದ, ಈ ಯುಗದ ಚಿತ್ರಕಲಾಶೈಲಿಯು ದಕ್ಷಿಣದಲ್ಲಿ ಗೋಲ್ಕೊಂಡ, ಬಿಜಾಪುರ ಮುಸಲ್ಮಾನ ಅರಸರ ಕಾಲದಲ್ಲಿ ಕಾಣಿಸಿಕೊಂಡಿತು. ಹದಿನಾಲ್ಕು, ಹದಿನೈದನೆಯ ಶತಮಾನಗಳಲ್ಲಿ ಈ ಕಡೆ ಅದು ಬೆಳೆಯಿತು. ಇದನ್ನು ದಕ್ಕನೀ ಶೈಲಿಯೆಂದು ಕರೆಯುತ್ತಾರೆ. ಈ ಶೈಲಿಯ ಪ್ರಭಾವ ವಿಜಯನಗರದ ಚಿತ್ರಗಾರರ ಮೇಲೆ ಅಷ್ಟಾಗಿ ಬಿದ್ದಂತೆ ಕಾಣುವುದಿಲ್ಲ; ಆದರೆ ತಂಜಾವೂರು ನಾಯಕರ ಆಡಳಿತದಲ್ಲಿ ಅಲ್ಲಿ ಬೇರೂರಿಕೊಂಡಿತು. ಮೈಸೂರು ಸೀಮೆಯ ಕಡೆ ಸಾಗಿ ಬರಲಿಲ್ಲ. ಈ ಶೈಲಿಯ ವ್ಯಾಪಕತೆಗೆ ಅಡ್ಡಿಯಾಗಿ ಇನ್ನೊಂದು ವಿವರ ಜರುಗಿತು. ಲಂಡನ್ನಿನ ವರ್ತಕರಿಗೆ ಈಸ್ಟ್ ಇಂಡೀಸ್ ಪ್ರದೇಶದೊಂದಿಗೆ ವ್ಯಾಪಾರ ಸಂಬಂಧವನ್ನು ಬೆಳೆಸಿಕೊಳ್ಳಲು ಆಗ ಇಂಗ್ಲೆಂಡಿನ ರಾಣಿಯಾಗಿದ್ದ ಮೊದಲನೆಯ ಎಲಿಸಬೆತ್ ಅನುಮತಿ ನೀಡಿದಳು. ಈಸ್ಟ್ ಇಂಡಿಯಾ ಕಂಪೆನಿ ಭಾರತದಲ್ಲಿ ಬೇರೂರಿಕೊಳ್ಳಲು ಇದು ಕಾರಣವಾಯಿತು. 1613ರಲ್ಲಿ ಮೊದಲನೆಯ ಜೇಮ್ಸ್ (ಇಂಗ್ಲೆಂಡಿನ ದೊರೆ) ಮುಗಲ್ ದೊರೆಯಾಗಿದ್ದ ಜಹಾಂಗೀರನ ಓಲಗಕ್ಕೆ ಸರ್ ತಾಮಸ್ ರೊ ಎಂಬ ರಾಯಭಾರಿಯನ್ನು ಕಳುಹಿಸಿ ಸೂರತಿನಲ್ಲಿ ಕಾರ್ಖಾನೆಯೊಂದನ್ನು ತೆರೆಯಲು ಅವಕಾಶ ಪಡೆದುಕೊಂಡದ್ದು, ಈ ಕಂಪೆನಿಯ ಬಲ ಕುದುರಿಕೊಳ್ಳಲು ನೆರವಾಯಿತು. ಇಂಗ್ಲೆಂಡಿನಿಂದ ವರ್ತಕರೊಂದಿಗೆ, ಅಧಿಕಾರಿಗಳೊಂದಿಗೆ ಚಿತ್ರಗಾರರೂ ನಮ್ಮ ದೇಶಕ್ಕೆ ಬಂದಿಳಿದರು.

1707ರಲ್ಲಿ ಔರಂಗಜೇಬನು ತೀರಿಕೊಂಡು, ಮುಗಲ್ ಸಾಮ್ರಾಜ್ಯ ಕಳೆಗುಂದಿದಾಗ ಮುಂದೆ ಐವತ್ತು ವರ್ಷಗಳಲ್ಲಿ ಈಸ್ಟ್ ಇಂಡಿಯ ಕಂಪೆನಿ ತನ್ನ ರಾಜಕೀಯ ಪ್ರಾಬಲ್ಯವನ್ನು ರೂಢಿಸಿಕೊಂಡು ಬಂಗಾಳದಲ್ಲಿಯೂ ಮತ್ತಿತರ ಕಡೆಗಳಲ್ಲಿಯೂ ತನ್ನ ಅಂಕೆ-ಅಧಿಕಾರಗಳನ್ನು ಹರಡಿತು.

ಹದಿನೆಂಟನೆಯ ಶತಮಾನದಲ್ಲಿ 'ಕಂಪೆನಿ' ಪ್ರಭಾವದಿಂದ ಮೈದಳೆದ ಚಿತ್ರಕಲಾಶೈಲಿಯಲ್ಲಿ ಮುಗಲ್ ಪದ್ಧತಿಯ ವಿವರಗಳೂ ಐರೋಪ್ಯಶೈಲಿಯ ಅಂಶಗಳೂ ಕೂಡಿಕೊಂಡುವು. ಆಂಗ್ಲ ರಸಿಕರು ಮುಗಲ್ ಕಿರುಚಿತ್ರಗಳನ್ನು ಮೆಚ್ಚಿಕೊಂಡರು; ಅಲ್ಲಿನ ವ್ಯಕ್ತಿಚಿತ್ರಣವನ್ನು ಹಾಡಿ ಹೊಗಳಿದರು. ತಿಳಿಯಾಗಿ ತೆಳುವಾಗಿ ಬಣ್ಣಗಳನ್ನು ಮೂಡಿಸುತ್ತಿದ್ದ ಬಗೆಯೂ ಅವರಿಗೆ ಹಿಡಿಸಿತು. ಐರೋಪ್ಯದೇಶದಿಂದ ತಂದ ಕಾಗದದ ಮೇಲೆ ವರ್ಣಚಿತ್ರಗಳನ್ನು ಬಿಡಿಸುವ ಪದ್ಧತಿ ಮೊದಲಾಯಿತು. ನಮ್ಮ ದೇಶದಲ್ಲಿ ಕಾಗದದ ಬಳಕೆ ಹದಿನಾಲ್ಕನೆಯ ಶತಮಾನದಿಂದ ಇದೆ; ಹದಿನಾರನೆಯ ಶತಮಾನದಿಂದ ಇಲ್ಲಿಯೆ ಅದರ ತಯಾರಿಕೆಯೂ ಇದ್ದಿತು. ಆದರೆ ಐರೋಪ್ಯದೇಶದಿಂದ ತಂದ ಕಾಗದ ನಮ್ಮ ಚಿತ್ರಗಾರರಿಗೆ ಪ್ರಿಯವೆನಿಸಿದ ಉಲ್ಲೇಖವಿದೆ.

1770ರ ಸುಮಾರಿಗೆ ಕ್ರೈಸ್ತಪಾದ್ರಿಗಳು ಐರೋಪ್ಯಚಿತ್ರಕಲೆಯನ್ನು ಇಲ್ಲಿನ ಆಸಕ್ತರಿಗೆ ಕಲಿಸತೊಡಗಿದರು. 1780ರಿಂದ 1880ರವರೆಗೆ ಈ ಪ್ರಭಾವ ಹರಡಿಕೊಂಡಿತು. ಆಗ ಮೈದಳೆದ ಕಲಸುಮೇಲೋಗರದ ಶೈಲಿಯನ್ನು 'ಕಂಪೆನಿ ಶೈಲಿ'ಯೆಂದು ಕರೆಯುವ ವಾಡಿಕೆಯಿದೆ. ಈಸ್ಟ್ ಇಂಡಿಯ ಕಂಪೆನಿಯ ಅಧಿಕಾರಿಗಳೂ, ಇಲ್ಲಿಗೆ ಬಂದ ಆಂಗ್ಲರೂ ಈ ಶೈಲಿಯನ್ನು ಪ್ರೋತ್ಸಾಹಿಸಿದರು. ಟೆಲಿ ಕೆಟ್ಲ್ ಎಂಬ ಆಂಗ್ಲ ಚಿತ್ರಗಾರ ಮದರಾಸಿಗೆ ಬಂದದ್ದು 1769ರಲ್ಲಿ. ಅವನು ಕ್ಯಾನ್ವಾಸಿನ ಮೇಲೆ ಮಾಡುತ್ತಿದ್ದ ವ್ಯಕ್ತಿಚಿತ್ರಣ ಮತ್ತು ಕಾಗದದ ಮೇಲಣ ಜಲವರ್ಣಚಿತ್ರಣ ಇವು ಜನಪ್ರಿಯವಾದುವು. ವಿಲಿಯಂ ಹಾಡ್ಜಸ್, ಡೇನಿಯಲ್, ಯೋಹಾನ್ ಜೊಫನಿ, ಜಾನ್ ಸ್ಮಾರ್ಟ್ ಮೊದಲಾದ ಆಂಗ್ಲ ಚಿತ್ರಗಾರರು ಇಲ್ಲಿನ ಚಿತ್ರಗಾರರ ಮೇಲೆ ಪ್ರಭಾವ ಬೀರಿದರು. ತೈಲವರ್ಣಚಿತ್ರಣ, ವ್ಯಕ್ತಿಚಿತ್ರಣ, ಪ್ರಸಂಗಚಿತ್ರಣ ಇವು ಈ ಪ್ರಭಾವದಲ್ಲಿ ಕೂಡಿಕೊಂಡುಬಂದುವು.

ಆದರೆ ಈ ಪ್ರಭಾವವನ್ನು ತಂಜಾವೂರಿನ ಅರಸರ ಓಲಗದಲ್ಲಿದ್ದ ಚಿತ್ರಗಾರರು ಅಳವಡಿಸಿಕೊಂಡಂತೆ ಮೈಸೂರಿನಲ್ಲಿದ್ದ ಚಿತ್ರಗಾರರು ಅಳವಡಿಸಿಕೊಳ್ಳಲಿಲ್ಲ. ದಕ್ಕನೀಶೈಲಿಯ ಪ್ರಭಾವವು ಇಲ್ಲಿ ಊರಿಕೊಳ್ಳಲಿಲ್ಲ. ದೇವತಾಚಿತ್ರಗಳನ್ನು ಬಿಡಿಸುವಾಗ ದಕ್ಕನೀಶೈಲಿಯಾಗಲಿ, ಕಂಪೆನಿ ಶೈಲಿಯಾಗಲಿ ಪ್ರಸ್ತುತವಾಗಲಾರದೆಂಬ ಅರಿವು ಮೈಸೂರಿನ ಚಿತ್ರಗಾರರಿಗಿದ್ದಂತೆ ತೋರುತ್ತದೆ. ಅವರು ಅಜಂಟ ಮೊದಲಾದ ಸಾಂಪ್ರದಾಯಿಕ ಶೈಲಿಯನ್ನೆ ಬಹುಮಟ್ಟಿಗೆ ಅವಲಂಬಿಸಿದರು. ಇದರೊಂದಿಗೆ ಜಾನಪದ ಚಿತ್ರಶೈಲಿಯ ಪ್ರಾದೇಶಿಕ ಪ್ರಸಾರವೂ ಒಡಮೂಡಿತು. ತಂಜಾವೂರಿನ ಅರಸ ಶರಭೋಜಿ (1798-1832) ಆಂಗ್ಲ ಸಂಸ್ಕೃತಿಯನ್ನು ಮೆಚ್ಚಿಕೊಂಡಂತೆ ಅದೇ ಸರಿಸುಮಾರಿನಲ್ಲಿದ್ದ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ಮೆಚ್ಚಿಕೊಂಡಿರಲಿಲ್ಲ. ಶರಭೋಜಿ ರಾಜ ತಾನೆ ಡೇನಿಷ್ ಚಿತ್ರಗಾರನೊಬ್ಬನ ಬಳಿ ಚಿತ್ರಕಲೆಯನ್ನು ಕಲಿತದ್ದೂ ಉಂಟು. ಮುಮ್ಮಡಿಯವರೋ ಸಂಪ್ರದಾಯಶರಣರು, ಇಲ್ಲಿನ ಕಲಾಧೋರಣೆಗೇ ಒಲಿದವರು. ಹೀಗಾಗಿ ಇಲ್ಲಿನ ಚಿತ್ರಕಲೆಯಲ್ಲಿ ಐರೋಪ್ಯ ಪ್ರಭಾವ ಆಗ ಮೂಡಿಬರಲಿಲ್ಲ. ಮುಂದೆ ಚಾಮರಾಜ ಒಡೆಯರ ಕಾಲದಲ್ಲಿ ಒದಗಿಬಂದಿತೆನ್ನಿ. ಅದು ಬೇರೆ ಕತೆ.

5

ಹೀಗೆ 'ಶ್ರೀತತ್ತ್ವನಿಧಿ'ಯ ಚಿತ್ರಗಳಲ್ಲಿ ನಾವು ಕಾಣುವುದು ಸಾಂಪ್ರದಾಯಿಕ ಶೈಲಿಯನ್ನೆ. ಮುಗಲ್, ದಕ್ಕನಿ ಮತ್ತು ಕಂಪೆನಿ ಪ್ರಭಾವಗಳಿಗೆ ಪಕ್ಕಾಗದೆ, ಹಿಂದಿನಿಂದ ಪರಂಪರೆಯಲ್ಲಿ ಬಂದ ನಮ್ಮದೇ ಆದ ಕಲೆಗಾರಿಕೆಯನ್ನೆ ಉಳಿಸಿಕೊಂಡು ಬಂದುದರಿಂದ ಇದನ್ನು ಸಾಂಪ್ರದಾಯಿಕ ಶೈಲಿಯೆಂದು ನಿರ್ದೇಶಿಸಬಹುದು. ವೀರಣ್ಣನ ಮನೆತನದಲ್ಲಿ ಉಳಿದುಕೊಂಡು ಬಂದಿರುವ ಚಿತ್ರಸಂಗ್ರಹದ ಸುರುಳಿಯಲ್ಲಿ ಸಾಂಪ್ರದಾಯಿಕ ರೇಖಾಚಿತ್ರಗಳ ಪದ್ಧತಿ ನಮ್ಮ ಗಮನಕ್ಕೆ ಬರುತ್ತದೆ. ಈ ಸುರುಳಿಯ ಸ್ವಾರಸ್ಯಗಳಲ್ಲಿ ಇದೂ ಒಂದು.

ಸುರುಳಿಯಲ್ಲಿ ಆರಾಧನೆಯ ಸಲುವಾಗಿ ದೇವತಾ ಮೂರ್ತಿಗಳ ಚಿತ್ರಣವಿದೆ. ಗಣಪತಿ, ಶಿವ, ಶಕ್ತಿ, ವಿಷ್ಣು, ಸ್ಕಂದ ಇವರ ಬೇರೆ ಬೇರೆ ಮೂರ್ತಿಗಳು, ಅಷ್ಟದಿಕ್ಪಾಲಕರು, ಸಪ್ತಮಾತೃಕೆಯರು, ನವಗ್ರಹಗಳು, ನಕ್ಷತ್ರಗಳು, ಶ್ರೀವಿದ್ಯೆಯ ಪರಿವಾರ ದೇವತೆಗಳು ಮೊದಲಾಗಿ ವಿಭಿನ್ನ ವರ್ಗಗಳನ್ನು ಚಿತ್ರಗಳಲ್ಲಿ ಕಾಣಿಸಿದ್ದಾರೆ. ದಕ್ಷಿಣದೇಶದಲ್ಲಿ ಮನೆಗಳಲ್ಲೂ, ಗುಡಿಗಳಲ್ಲೂ ವಿಶೇಷವಾಗಿ ಪೂಜೆಗೊಳ್ಳುವ ದೇವತಾ ಮೂರ್ತಿಗಳನ್ನೂ, ಪೌರಾಣಿಕ ಮನೋಧರ್ಮದ ಜಾಡುಹಿಡಿದು ಬಳಕೆಯಲ್ಲಿರುವ ಕಲ್ಪನೆಯ ಮೂರ್ತಿಗಳನ್ನೂ ಇಲ್ಲಿ ಗುರುತಿಸಬಹುದು. ಒಂದೊಂದು ದೇವತಾ ಮೂರ್ತಿಯನ್ನು ಚಿತ್ರಿಸುವಾಗಲೂ ಚಿತ್ರಗಾರರು ಶಿಲ್ಪ ಶಾಸ್ತ್ರಗಳಲ್ಲಿ, ಆಗಮ ಗ್ರಂಥಗಳಲ್ಲಿ ಬರುವ ಆಯಾ ಧ್ಯಾನಶ್ಲೋಕವನ್ನು ಗಮನದಲ್ಲಿರಿಸಿ ಕೊಂಡಿರುವುದು ಕಾಣುತ್ತದೆ.

ಕರ್ನಾಟಕ ಚಿತ್ರಕಲಾ ಪರಿಷತ್ತು ಪ್ರಕಟನೆಗೆ ಎತ್ತಿಕೊಂಡಿರುವ ಈ ಚಿತ್ರಸಂಗ್ರಹದ ಮಾಲೆಯಲ್ಲಿ ಮೊದಲನೆಯದು ಗಣಪತಿಯನ್ನು ಕುರಿತದ್ದು. ಇಲ್ಲಿ ಮೂವತ್ತೆರಡು ಬೇರೆ ಬೇರೆ ಗಣಪತಿಯ ಮೂರ್ತಿಗಳ ರೇಖಾಚಿತ್ರಗಳಿವೆ. ಒಂದೊಂದು ಚಿತ್ರದ ಮೇಲೂ ಮೂರ್ತಿಭೇದದ ಹೆಸರು ನಿರ್ದಿಷ್ಟವಾಗಿದೆ; ಸಾಂಪ್ರದಾಯಿಕ ಬಣ್ಣವೂ ಸೂಚಿತವಾಗಿದೆ. ಈ ಮೂವತ್ತೆರಡು ಗಣಪತಿಗಳ ಒಕ್ಕಣೆಯನ್ನು ಮುದ್ಗಲ ಪುರಾಣದಿಂದ ಎತ್ತಿಕೊಂಡಂತೆ ತೋರುತ್ತದೆ. 'ಶ್ರೀತತ್ತ್ವನಿಧಿ'ಯಲ್ಲೂ ಇವೇ ಮೂರ್ತಿಗಳನ್ನು ಕಾಣುವೆವು. ಮುದ್ಗಲ ಪುರಾಣವೆನ್ನುವುದು ಗಣೇಶನ ಹಿರಿಮೆಯನ್ನಷ್ಟೆ

ಹೇಳುವ ಒಂಬತ್ತು ಖಂಡಗಳ ಒಂದು ಉಪಪುರಾಣ; ಇದರಲ್ಲಿ 989 ಶ್ಲೋಕಗಳುಳ್ಳ 'ಯೋಗಗೀತಾ' ಎನ್ನುವ ಸ್ವಾರಸ್ಯವಾದ ಭಾಗವೂ ಕಡೆಯಲ್ಲಿ ಸೇರಿದೆ. ಇದು ಮಹಾರಾಷ್ಟ್ರ, ಮತ್ತು ಮಹಾರಾಷ್ಟ್ರದ ಪ್ರಭಾವವುಳ್ಳ ಪ್ರದೇಶಗಳಲ್ಲಿ ತುಂಬ ಬಳಕೆಯಲ್ಲಿದ್ದಿತು. ತಂಜಾವೂರಿನಲ್ಲೂ, ಕರ್ನಾಟಕದಲ್ಲೂ ಇದರ ಜನಪ್ರೀತಿ ಮಹಾರಾಷ್ಟ್ರದ ಕೊಡುಗೆಯೆ ಎನ್ನಬಹುದು. ಈ ಪುರಾಣದಿಂದ ಗಣೇಶನನ್ನು ಕುರಿತ ಧ್ಯಾನಶ್ಲೋಕಗಳನ್ನು ಶಿಲ್ಪಿಗಳು ಆಯ್ದುಕೊಂಡಿದ್ದಾರೆ. ಚಿತ್ರಕ್ಕೂ, ಶಿಲ್ಪಕ್ಕೂ ಈ ಧ್ಯಾನಶ್ಲೋಕಗಳು ನೆರವಾಗಿವೆ.

ಮುದ್ಗಲಪುರಾಣದ ಆಧಾರದ ಮೇಲೆ ಮೂವತ್ತೆರಡು ಗಣಪತಿ ರೂಪಗಳನ್ನು ನಿರ್ದೇಶಿಸುವುದು ವಾಡಿಕೆ. ಆದರೆ ಇವುಗಳಲ್ಲಿ 'ಶ್ರೀ ವಿದ್ಯಾರ್ಣವ ತಂತ್ರ' ಮೊದಲಾದ ಪ್ರಾಚೀನ ಗ್ರಂಥಗಳಲ್ಲಿ ಹದಿನೈದು ರೂಪಗಳು ಕಾಣಸಿಗುತ್ತವೆ; ಇವನ್ನೆ ದಕ್ಷಿಣದೇಶದ ಗುಡಿಗಳಲ್ಲಿ ಬಹುಮಟ್ಟಿಗೆ ಶಿಲ್ಪಗಳಾಗಿ ನೋಡುತ್ತೇವೆ. ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಹೊರಪ್ರಾಕಾರದ ಗೂಡುಗಳಲ್ಲಿ ಮೂವತ್ತೆರಡು ಗಣಪತಿ ರೂಪಗಳಿದ್ದರೂ, ಅವೆಲ್ಲ ಮುದ್ಗಲ ಪುರಾಣದ ಒಕ್ಕಣೆಗೆ ಅನುಗುಣವಾಗಿಲ್ಲ. ಶಿಲ್ಪದಲ್ಲಾಗಲಿ, ಪೂಜೆಯಲ್ಲಾಗಲಿ ವಿಶೇಷವಾಗಿ ಬಳಕೆಯಲ್ಲಿರುವ ರೂಪಗಳು ಕ್ಷಿಪ್ರ ಗಣಪತಿ, ವರ ಗಣಪತಿ, ಸಿದ್ಧಿ ಗಣಪತಿ, ಲಕ್ಷ್ಮೀ ಗಣಪತಿ, ಮಹಾ ಗಣಪತಿ, ಸಂಕಷ್ಟಹರ ಗಣಪತಿ, ಡುಂಢಿ ಗಣಪತಿ, ಉಚ್ಛಿಷ್ಟ ಗಣಪತಿ, ಹರಿದ್ರಾ ಗಣಪತಿ, ಏಕದಂತ ಗಣಪತಿ ಹೀಗೆ ಕೆಲವು. ಕೆಲವು ರೂಪಗಳು ಶಿಲ್ಪಿಯ ಕಲ್ಪನೆಯ ಕೂಸುಗಳು — ನೃತ್ಯ ಗಣಪತಿ, ಬಾಲ ಗಣಪತಿ, ಸಿಂಹ ಗಣಪತಿ, ದ್ವಿಮುಖ ಗಣಪತಿ, ಹೇರಂಬ ಗಣಪತಿ ಇತ್ಯಾದಿ.

'ಶ್ರೀತತ್ತ್ವನಿಧಿ'ಯಲ್ಲಿಯೂ ವೀರಣ್ಣನ ಮನೆತನದಲ್ಲಿ ಉಳಿದುಬಂದಿರುವ ಚಿತ್ರಸಂಗ್ರಹದ ಸುರುಳಿಯಲ್ಲಿಯೂ ಕಾಣಸಿಗುವ ಮೂವತ್ತೆರಡು ಗಣಪತಿ ರೂಪಗಳು ಮುದ್ಗಲ ಪುರಾಣದಿಂದಲೆ ಮೂಡಿಕೊಂಡಿದ್ದರೂ ಕೆಲವೊಂದು ವಿವರಗಳಲ್ಲಿ ವೈವಿಧ್ಯವಿರುವುದನ್ನು ಗಮನಿಸಬಹುದು. ಆಂಧ್ರಪ್ರದೇಶ ಸರಕಾರವು (ದೇವಾದಾಯ—ಧರ್ಮಾದಾಯ ಶಾಖೆ) ಈ ಪುರಾಣದಿಂದ ಧ್ಯಾನಶ್ಲೋಕಗಳನ್ನು ಶಿಲ್ಪಕ್ಕೆ ಅಣಿಗೊಳಿಸಿ ಮೂವತ್ತೆರಡು ಗಣಪತಿ ರೂಪಗಳ ಚಿತ್ರಗಳನ್ನು ಸಿದ್ಧಮಾಡಿ ಪ್ರಕಟಿಸಿದ್ದಾರೆ. (ರೂಪಧ್ಯಾನ ರತ್ನಾವಳಿ, ಹೈದರಾಬಾದು 1981). ಇಲ್ಲಿರುವ ವಿವರಗಳಿಗೂ ಮೈಸೂರು ಅರಮನೆಯಲ್ಲಿ ಸಿದ್ಧವಾದ ವಿವರಗಳಿಗೂ ಕೊಂಚಮಟ್ಟಿಗೆ ವ್ಯತ್ಯಾಸವಿದೆ. ನಂಜನಗೂಡು ಗುಡಿಯಲ್ಲಿರುವ ಗಣಪತಿ ಮೂರ್ತಿಗಳ ವಿವರಗಳಿಗೂ ಆಂಧ್ರಪ್ರದೇಶ ಸರಕಾರದ ಪ್ರಕಟಣೆಯಲ್ಲಿರುವ ವಿವರಗಳಿಗೂ ಬಹುಮಟ್ಟಿಗೆ ಇರುವ ಹೊಂದಾಣಿಕೆಯನ್ನು ಗಮನಿಸಬಹುದು. ಬಹುಶಃ ಚಿತ್ರಕ್ಕೆ, ಶಿಲ್ಪಕ್ಕೆ ಅನುಕೂಲವಾಗುವಂತೆ ಬೇರೆ ಬೇರೆ ನಿರ್ದೇಶನಗಳಿದ್ದುವೊ ಏನೊ.

ಪ್ರಸ್ತುತ ಸುರುಳಿಯಲ್ಲಿರುವ ಮೂವತ್ತೆರಡು ಗಣಪತಿ ರೂಪಗಳ ಚಿತ್ರಗಳನ್ನು ಮುದ್ಗಲ ಪುರಾಣದ ಆಧಾರದ ಮೇಲೆ ಚಿತ್ರಗಾರರು ಆಯ್ದುಕೊಂಡಿರಬಹುದಾದ ಧ್ಯಾನಶ್ಲೋಕಗಳೊಂದಿಗೆ ಇಲ್ಲಿ ಕೊಡಲಾಗಿದೆ. ಸುರುಳಿಯಲ್ಲೇನೋ ಧ್ಯಾನಶ್ಲೋಕಗಳಿಲ್ಲ; ರೂಪದ ಹೆಸರನ್ನು ಮಾತ್ರ ಒಕ್ಕಣಿಸಿದ್ದಾರೆ. 'ಶ್ರೀತತ್ತ್ವನಿಧಿ' ಯಲ್ಲಿ ಧ್ಯಾನಶ್ಲೋಕಗಳಿವೆ. ಆಂಧ್ರಪ್ರದೇಶ ಸರಕಾರದ ಪ್ರಕಟಣೆಯಲ್ಲಿ ಧ್ಯಾನಶ್ಲೋಕಗಳನ್ನು ಸೇರಿಸಿದ್ದಾರೆ.

ಧ್ಯಾನಶ್ಲೋಕಗಳು

1. ಬಾಲ ಗಣಪತಿ

ಕರಸ್ಥ ಕದಲೀ ಚೂತಪನಸೇಕ್ಷುಕ ಮೋದಕಂ ।
ಬಾಲಸೂರ್ಯಮಿಮಂ ವಂದೇ ದೇವಂ ಬಾಲಗಣಾಧಿಪಂ ॥

2. ತರುಣ ಗಣಪತಿ

ಪಾಶಾಂಕುಶಾಪೂಪಕಪಿತ್ಥ ಜಂಬು -
ಸ್ವದಂತ ಶಾಲೀಕ್ಷುಮಪಿ ಸ್ವಹಸ್ತೈಃ ।
ಧತ್ತೇ ಸದಾ ಯಸ್ತರುಣಾರುಣಾಭಃ
ಪಾಯಾತ್ಸ ಯುಷ್ಮಾಂಸ್ತರುಣೋ ಗಣೇಶಃ ॥

3. ಭಕ್ತ ಗಣಪತಿ

ನಾಲಿಕೇರಾಮ್ರ ಕದಲೀ ಗುಡಪಾಯಸಧಾರಿಣಂ ।
ಶರಚ್ಚಂದ್ರಾಭವಪುಷಂ ಭಜೇ ಭಕ್ತ ಗಣಾಧಿಪಂ ॥

4. ವೀರ ಗಣಪತಿ

ವೇತಾಲ ಶಕ್ತಿ ಶರ ಕಾರ್ಮುಕ ಚಕ್ರಖಡ್ಗ
ಖಟ್ವಾಂಗ ಮುದ್ಗರ ಗದಾಂಕುಶ ನಾಗಪಾಶಾನ್ ।
ಶೂಲಂ ಚ ಕುಂತಪರಶುಧ್ವಜಮುದ್ವಹಂತಂ
ವೀರಂ ಗಣೇಶಮರುಣಂ ಸತತಂ ಸ್ಮರಾಮಿ ॥

1

1. ಬಾಲ ಗಣಪತಿ

ಎಳೆಯ ಸೂರ್ಯನಂತೆ ಬೆಳಗುವನೆಂದು ಬಾಲಗಣಪತಿ. ನಾಲ್ಕು ಕೈಗಳು; ಕೈಗಳಲ್ಲಿ ಪ್ರದಕ್ಷಿಣಕ್ರಮವಾಗಿ ಮಾವಿನಹಣ್ಣು, ಮಾವಿನ ಚಿಗುರು (ಚೂತ), ಕಬ್ಬಿನ ಜಲ್ಲೆ (ಇಕ್ಷುದಂಡ), ಕಡಬು (ಮೋದಕ) ಇವನ್ನು ಚಿತ್ರದಲ್ಲಿ ಕಾಣಬಹುದು. ಧ್ಯಾನಶ್ಲೋಕದಲ್ಲಿ ಬಾಳೆಯ ಹಣ್ಣು (ಕದಲೀ) ಎಂದು ಇನ್ನೊಂದು ವಿವರನ್ನು ಸೂಚಿಸಿದ್ದಾರೆ; ಚಿತ್ರದಲ್ಲಿ ಇದು ಕಾಣುವುದಿಲ್ಲ.

2

2. ತರುಣ ಗಣಪತಿ

ಸೂರ್ಯ ಹುಟ್ಟುವ ಮೊದಲು ಕಾಣಿಸಿಕೊಳ್ಳುವ ಕೆಂಪಡರಿದ ಬಣ್ಣ 'ತರುಣಾರುಣ' (ಚಿತ್ರದಲ್ಲಿ 'ಶಿಂದೂರ ವರ್ಣ' ಎಂದು ಒಕ್ಕಣೆಯಿದೆ). ಇದರಂತಿರುವ ಗಣಪತಿ ತರುಣ ಗಣಪತಿ. ಎಂಟು ಕೈಗಳು; ಕೈಗಳಲ್ಲಿ ಪ್ರದಕ್ಷಿಣಕ್ರಮವಾಗಿ ತನ್ನ ದಾಡೆ (ಹಲ್ಲು, ದಂತ), ಬತ್ತದ ತೆನೆ (ಶಾಲಿ), ಕಬ್ಬಿನ ಜಲ್ಲೆ (ಇಕ್ಷು), ಅಂಕುಶ, ಪಾಶ, ಅಪೂಪ, ಹಲಸಿನ ಹಣ್ಣು (ಪನಸ), ಬೇಲದ ಕಾಯಿ (ಕಪಿತ್ಥ) ಇವು ಚಿತ್ರದಲ್ಲಿವೆ. ಧ್ಯಾನಶ್ಲೋಕದಲ್ಲಿ ಹಲಸಿನ ಹಣ್ಣಿನ ಬದಲು ಜಂಬೂಫಲವನ್ನು ಸೂಚಿಸಿದ್ದಾರೆ.

3

3. ಭಕ್ತ ಗಣಪತಿ

ಭಕ್ತವೆಂದರೆ ಅನ್ನ, ಆಹಾರ. ಕೈಗಳಲ್ಲಿ ಬರಿಯ ಆಹಾರ ಪದಾರ್ಥಗಳೆ ಇರುವುದರಿಂದ ಭಕ್ತ ಗಣಪತಿ. ನಾಲ್ಕು ಕೈಗಳು; ಪ್ರದಕ್ಷಿಣಕ್ರಮವಾಗಿ ಬಾಳೆಯಹಣ್ಣು (ಕದಲೀ), ಮಾವಿನ ಹಣ್ಣಿನೊಂದಿಗೆ ಚಿಗುರು (ಆಮ್ರ), ಹಲಸಿನ ಹಣ್ಣು (ಪನಸ) ಮತ್ತು ಬೆಲ್ಲದ ಪಾಯಸ ತುಂಬಿದ ಪಾತ್ರೆ. ಧ್ಯಾನಶ್ಲೋಕದಲ್ಲಿ ಹಲಸಿನ ಹಣ್ಣಿನ ಬದಲು ತೆಂಗಿನಕಾಯಿ (ನಾರಿಕೇಳ) ಎಂದಿದೆ. ಈ ಗಣಪತಿಯ ಬಣ್ಣ ಶರತ್ಕಾಲದ ಚಂದ್ರನಂತೆ ಎಂದು ಒಕ್ಕಣೆ.

4

4. ವೀರ ಗಣಪತಿ

ವೀರೋತ್ಸಾಹ ಸೂಚಕವಾದ ಆಯುಧಗಳನ್ನು ಧರಿಸಿದವನಾಗಿ 'ವೀರ'. ಹದಿನಾರು ಕೈಗಳು; ಇವುಗಳಲ್ಲಿ ಪ್ರದಕ್ಷಿಣ ಕ್ರಮವಾಗಿ ನಾಗಪಾಶ, ಮುದ್ಗರ, ಗದೆ, ಚಕ್ರ, ಅಂಕುಶ, ಕುಂತ ಅಥವಾ ಶಕ್ತ್ಯಾಯುಧ, ಬಾಣ (ಶರ), ಬೇತಾಳ (ವೇತಾಲ), ಪಾಶ, ಧನುಸ್ಸು (ಕಾರ್ಮುಕ), ಬಾವುಟ (ಧ್ವಜ), ಕೊಡಲಿ (ಪರಶು), ಕತ್ತಿ (ಖಡ್ಗ), ತ್ರಿಶೂಲ, ಘಂಟೆ ಇವು ಚಿತ್ರದಲ್ಲಿವೆ. ಧ್ಯಾನಶ್ಲೋಕದಲ್ಲಿ ಖಟ್ವಾಂಗ (ಮೂಳೆಯ ಕಡ್ಡಿಗೆ ತಲೆಯೋಡೆಯನ್ನು ಸಿಕ್ಕಿಸಿ ಮಾಡಿದ ಆಯುಧ)ವೊಂದನ್ನು ಕಾಣಿಸಿದ್ದಾರೆ; ಚಿತ್ರದಲ್ಲಿ ಇಲ್ಲ.

5. ಶಕ್ತಿ ಗಣಪತಿ

ಆಲಿಂಗ್ಯ ದೇವೀಂ ಹರಿತಾಂಗಯಷ್ಟಿಂ
    ಪರಸ್ಪರಾಶ್ಲಿಷ್ಟ ಕಟಿ ಪ್ರದೇಶಂ ।
ಸಂಧ್ಯಾರುಣಾಂ ಪಾಶಸೃಣೀ ವಹಂತಂ
    ಭಯಾಪಹಂ ಶಕ್ತಿ ಗಣೇಶಮೀಡೇ ॥

6. ದ್ವಿಜ ಗಣಪತಿ

ಯಂ ಪುಸ್ತಕಾಕ್ಷಗುಣದಂಡಕಮಂಡಲುಶ್ರೀ -
    ವಿದ್ಯೋತಮಾನಕರಭೂಷಣಮಿಂದುವರ್ಣಂ ।
ಸ್ತಂಬೇರಮಾನನಚತುಷ್ಟಯ ಶೋಭಮಾನಂ
    ತ್ವಾಂ ಯಃ ಸ್ಮರೇದ್ದ್ವಿಜಗಣಾಧಿಪತೇ ಸ ಧನ್ಯಃ ॥

7. ಸಿದ್ಧಿ ಗಣಪತಿ

ಪಕ್ವಚೂತ ಫಲಪುಷ್ಪಮಂಜರೀ
    ಚೇಕ್ಷು ದಂಡತಿಲಮೋದಕೈಃ ಸಹ ।
ಉದ್ವಹನ್ ಪರಶುಮಸ್ತುತೇ ನಮಃ
    ಶ್ರೀ ಸಮೃದ್ಧಿಯುತ ಹೇಮಪಿಂಗಲ ॥

8. ಉಚ್ಛಿಷ್ಟ ಗಣಪತಿ

ನೀಲಾಬ್ಜದಾಡಿಮ ವೀಣಾ ಶಾಲೀ ಗುಂಜಾಕ್ಷ ಸೂತ್ರಂ ।
    ದಧದುಚ್ಛಿಷ್ಟನಾಮಾಯಂ ಗಣೇಶಃ ಪಾತು ಮೇಚಕಃ ॥

5

5. ಶಕ್ತಿ ಗಣಪತಿ

ಶಕ್ತಿಯನ್ನು ಎಂದರೆ ದೇವಿಯನ್ನು ತನ್ನ ಎಡತೊಡೆಯ ಮೇಲೆ ಕೂಡಿಸಿಕೊಂಡು ಸುಖಾಸೀನನಾಗಿ ಕೂತಿರುವ ರೂಪ. ನಾಲ್ಕು ಕೈಗಳು; ಅಭಯ ಮುದ್ರೆ (ಭಯಾಪಹ), ಅಂಕುಶ (ಸೃಣೀ), ಪಾಶ ಮತ್ತು ಕಡಬು (ಮೋದಕ) ಇವು ಪ್ರದಕ್ಷಿಣಕ್ರಮವಾಗಿ ನಾಲ್ಕು ಕೈಗಳಲ್ಲಿ; ಸೊಂಡಿಲಲ್ಲಿ ದೇವಿಯ ಒಂದು ಸ್ತನವನ್ನು ಹಿಡಿದಿದ್ದಾನೆ. ದೇವಿಯ ಸೊಂಟವನ್ನು ಒಂದು ಕೈ ಬಳಸಿಬಂದಿದೆ. ಧ್ಯಾನಶ್ಲೋಕದಲ್ಲಿ ಕಡಬು ಸೇರುವುದಿಲ್ಲ. ಗಣಪತಿಯು ಸಂಜೆಯ ನಸುಗೆಂಪಿನ ಬಣ್ಣದವನು; ದೇವಿಯದು ಹಸಿರುಬಣ್ಣ.



6

6. ದ್ವಿಜ ಗಣಪತಿ

ದ್ವಿಜನೆಂದರೆ ಇಲ್ಲಿ ಬ್ರಹ್ಮ; ಚತುರ್ಮುಖ ಬ್ರಹ್ಮನ ಗುಣವಿಶೇಷಗಳನ್ನು ಅಳವಡಿಸಿಕೊಂಡ ರೂಪ ಇದು. ನಾಲ್ಕು ತಲೆಗಳು, ನಾಲ್ಕು ಕೈಗಳು; ಕೈಗಳಲ್ಲಿ ಅಕ್ಷಮಾಲೆ, ದಂಡ, ಕಮಂಡಲು ಮತ್ತು ಪುಸ್ತಕ (ವೇದ). ಚಂದ್ರನ ಬಣ್ಣ ಎಂದರೆ ಬಿಳಿಯ ಬಣ್ಣ.



7

7, ಸಿದ್ಧಿ ಗಣಪತಿ

ಸಿದ್ಧಿಯನ್ನು ಸೂಚಿಸುವ ಕಳಿತ ಮಾವಿನ ಹಣ್ಣು (ಪಕ್ವಚೂತ ಫಲ), ಕೊಡಲಿ (ಪರಶು), ಕಬ್ಬಿನ ಜಲ್ಲೆ (ಇಕ್ಷುದಂಡ), ಮತ್ತು ಅಕ್ಷಮಾಲೆ ಹಿಡಿದ ನಾಲ್ಕು ಕೈಗಳು. ಧ್ಯಾನಶ್ಲೋಕದಲ್ಲಿ ಚಿತ್ರದಲ್ಲಿಲ್ಲದ ಹೂ ಗೊಂಚಲು (ಪುಷ್ಪಮಂಜರಿ) ಮತ್ತು ಎಳ್ಳಿನ ಕಡಬು (ತಿಲಮೋದಕ)ಗಳನ್ನು ಹೇಳಿದ್ದಾರೆ; ಚಿತ್ರದಲ್ಲಿರುವ ಅಕ್ಷಮಾಲೆಯನ್ನು ಬಿಟ್ಟಿದ್ದಾರೆ. ಗಣಪತಿಯ ಬಣ್ಣ ಬಂಗಾರದ್ದು.

8

8. ಉಚ್ಛಿಷ್ಟ ಗಣಪತಿ

ತಾಂತ್ರಿಕ ಸಾಧನೆಯಲ್ಲಿ ವಾಮಮಾರ್ಗಿಗಳು ಈ ರೂಪವನ್ನು ಬಳಸುವುದರಿಂದ ಇದು 'ಉಚ್ಛಿಷ್ಟ'. ತೊಡೆಯ ಮೇಲೆ ತನ್ನ ಶಕ್ತಿ (ದೇವಿ); ಸೊಂಡಿಲು ಆಕೆಯ ಗುಹ್ಯ ಸ್ಥಾನವನ್ನು ಮುಟ್ಟುತ್ತಿದೆ, ಒಂದು ಕೈ ಆಕೆಯನ್ನು ಅಪ್ಪಿ ಹಿಡಿದಿದೆ. ಆರು ಕೈಗಳು; ವೀಣೆ, ಅಕ್ಷಮಾಲೆ, ದಾಳಿಂಬೆ ಹಣ್ಣು (ದಾಡಿಮ), ಬತ್ತನ ತೆನೆ (ಶಾಲಿ), ನೀಲಕಮಲ ಮತ್ತು ಗುಂಜಾಫಲ ಇವು ಪ್ರದಕ್ಷಿಣಕ್ರಮವಾಗಿ ಕೈಗಳಲ್ಲಿವೆ. ಗಣಪತಿಯ ಬಣ್ಣ ನೀಲಿಯೆಂದೂ ದೇವಿಯ ಬಣ್ಣ ಸಿಂಧೂರವೆಂದೂ ಚಿತ್ರದಲ್ಲಿ ಒಕ್ಕಣೆಯಿದೆ; ಧ್ಯಾನಶ್ಲೋಕದಲ್ಲಿ ಈ ವಿವರವಿಲ್ಲ.

9. ವಿಘ್ನ ಗಣಪತಿ

ಶಂಖೇಕ್ಷುಚಾಪ ಕುಸುಮೇಷು ಕುಠಾರ ಪಾಶ
ಚಕ್ರ ಸ್ವದಂತ ಸೃಣಿ ಮಂಜರಿಕಾ ಶರೌಘೈಃ ।
ಪಾಣಿಶ್ರಿತೈಃ ಪರಶುವಿಹಿತ ಭೂಷಣ ಶ್ರೀಃ
ವಿಘ್ನೇಶ್ವರೋ ವಿಜಯತೇ ತಪನೀಯ ಗೌರಃ ॥

10. ಕ್ಷಿಪ್ರ ಗಣಪತಿ

ದಂತಕಲ್ಪಲತಾ ಪಾಶರತ್ನ ಕುಂಭಾಂಕುಶೋಜ್ಜಲಂ ।
ಬಂಧೂಕಕಮನೀಯಾಭಂ ಧ್ಯಾಯೇತ್ ಕ್ಷಿಪ್ರ ಗಣಾಧಿಪಂ ॥

11. ಹೇರಂಬ ಗಣಪತಿ

ಅಭಯವರದಹಸ್ತಃ ಪಾಶದಂತಾಕ್ಷಮಾಲಾ
ಸೃಣಿ ಪರಶು ದಧಾನೋ ಮುದ್ಗರಂ ಮೋದಕಂ ಚ ।
ಫಲಮಧಿಗತಸಿಂಹಃ ಪಂಚಮಾತಂಗವಕ್ತ್ರೋ
ಗಣಪತಿರತಿಗೌರಃ ಪಾತು ಹೇರಂಬನಾಮಾ ॥

12. ಲಕ್ಷ್ಮೀ ಗಣಪತಿ

ಬಿಭ್ರಾಣಃ ಶುಕಬೀಜಪೂರಕ ಮಿಲನ್ಮಾಣಿಕ್ಯ ಕುಂಭಾಂಕುಶಾನ್
ಪಾಶಂ ಕಲ್ಪಲತಾಂ ಚ ಖಡ್ಗವಿಲಸ-ಜ್ಯೋತಿಃ ಸುಧಾನಿರ್ಝರಃ ।
ಶ್ಯಾಮೇನಾತ್ತ ಸರೋರುಹೇಣಸಹಿತಂ ದೇವೀ ದ್ವಯಂ ಚಾಂತಿಕೇ
ಗೌರಾಂಗೋ ವರದಾನಹಸ್ತಸಹಿತೋ ಲಕ್ಷ್ಮೀ
ಗಣೇಶೋವತಾತ್ ॥

9

9. ವಿಘ್ನ ಗಣಪತಿ

ತೊಂದರೆಗಳನ್ನೊಡ್ಡುವ, ನೀಗಿಸುವ ರೂಪ. ಎಂಟು ಕೈಗಳು; ಕೈಗಳಲ್ಲಿ ಪ್ರದಕ್ಷಿಣಕ್ರಮವಾಗಿ ಚಕ್ರ, ದಾಡೆ (ದಂತ), ಕೊಡಲಿ (ಪರಶು), ಹೂಬಾಣ (ಕುಸುಮೇಷು), ಕಬ್ಬಿನ ಜಲ್ಲೆ (ಇಕ್ಷು ಚಾಪ), ಪಾಶ, ಕುಠಾರ ಮತ್ತು ಶಂಖ. ಸೊಂಡಿಲಲ್ಲಿ ಚಿಗುರೆಲೆಳ ಗೊಂಚಲು (ಮಂಜರಿಕಾ), ಬಣ್ಣ ಬಿಳಿಯದು.

10

10. ಕ್ಷಿಪ್ರ ಗಣಪತಿ

ಒಡನೆಯೆ ತೋರಿಕೊಳ್ಳುವ ರೂಪ, ನಾಲ್ಕು ಕೈಗಳು ದಾಡೆ (ದಂತ), ಅಂಕುಶ, ಪಾಶ ಮತ್ತು ಕಲ್ಪವೃಕ್ಷದ ರೆಂಬೆ ;ಇವು ಪ್ರದಕ್ಷಿಣಕ್ರಮವಾಗಿ ಮತ್ತು ಸೊಂಡಿಲಲ್ಲಿ ಹಿಡಿದ ರತ್ನಕುಂಭ. ಬಂಧೂಕಪುಷ್ಪದಂತೆ ಮೈಬಣ್ಣ; ಚಿತ್ರದಲ್ಲಿ 'ಶಿಂಧೂರವರ್ನಾ' ಎಂದು ಕಾಣಿಸಿದೆ.

11

11. ಹೇರಂಬ ಗಣಪತಿ

ಐದು ತಲೆಗಳ ರೂಪ. ಸಿಂಹವಾಹನ. ಹತ್ತು ಕೈಗಳು; ಕ್ರಮವಾಗಿ ಅಭಯಮುದ್ರೆ, ಕಲ್ಹಾರ, ಅಕ್ಷಮಾಲೆ, ಗದೆ, ದಾಡೆ (ದಂತ), ಪಾಶ, ಅಂಕುಶ (ಸೃಣಿ), ಕೊಡಲಿ (ಪರಶು), ಮತ್ತು ಹಣ್ಣು (ಫಲ) ಚಿತ್ರದಲ್ಲಿ ಕಾಣುತ್ತವೆ. ಧ್ಯಾನಶ್ಲೋಕದಲ್ಲಿ ಕಲ್ಹಾರಕ್ಕೆ ಬದಲು ಮುದ್ಗರ ಎಂದಿದೆ. ಗದೆಯಿಲ್ಲ; ಮೋದಕವನ್ನು ಸೇರಿಸಿದ್ದಾರೆ. ಬಿಳಿಯ ಮೈಬಣ್ಣ.

12

12. ಲಕ್ಷ್ಮೀ ಗಣಪತಿ

ಎಡ-ಬಲ ತೊಡೆಗಳ ಮೇಲೆ ದೇವಿಯರಿಬ್ಬರನ್ನು ಕೂಡಿಸಿಕೊಂಡಿರುವ ರೂಪ. ಎಂಟು ಕೈಗಳು; ಕೈಗಳಲ್ಲಿ ಕ್ರಮವಾಗಿ ದಾಳಿಂಬೆ ಹಣ್ಣು (ಬೀಜಪೂರಕ), ರತ್ನಕುಂಭ, ಗಿಣಿ (ಶುಕ), ಅಂಕುಶ, ಪಾಶ, ಕಲ್ಪಲತೆ, ಕತ್ತಿ (ಖಡ್ಗ) ಮತ್ತು ವರದಾನಮುದ್ರೆ. ದೇವಿಯರ ಕೈಗಳಲ್ಲಿ ನೀಲಕಮಲ (ಶ್ಯಾಮಸರೋರುಹ). ಧ್ಯಾನಶ್ಲೋಕದಲ್ಲಿ ಇವೆಲ್ಲ ವಿವರಗಳೂ ಇವೆ. ಆದರೆ ಅಲ್ಲಿ ಗಣಪತಿಯ ಮೈಬಣ್ಣ ಬಿಳಿ (ಗೌರ) ಎಂದಿದ್ದರೆ, ಚಿತ್ರಗಾರರು 'ಕನಕವರ್ನಾ' ಎಂದು ಸೂಚಿಸಿ 'ಅಂಮನವರು ಗೌರವವರ್ನಾ' ಎಂದು ಕಾಣಿಸಿದ್ದಾರೆ. ಇಬ್ಬರು ದೇವಿಯರನ್ನು 'ಸಿದ್ಧಿ' ಮತ್ತು 'ಬುಡ್ಡಿ' ಎಂದು ನಿರ್ದೇಶಿಸುವುದು ವಾಡಿಕೆ.

13. ಮಹಾ ಗಣಪತಿ

ಹಸ್ತೇಂದ್ರಾನನಮಿಂದುಚೂಡ-ಮರುಣಚ್ಛಾಯಂ ತ್ರಿಣೇತ್ರಂ ರಸಾ-
ದಾಶ್ಲಿಷ್ಟಂ ಪ್ರಿಯಯಾ ಸಪದ್ಮ -ಕರಯಾ ಸ್ವಾಂಕಸ್ಥಯಾ
ಸಂತತಂ ।
ಬೀಜಾಪೂರಗದೇಕ್ಷು ಕಾರ್ಮುಕ - ಲಸಚ್ಚಕ್ರಾಬ್ಜಪಾಶೋತ್ಪಲ-
ವ್ರೀಹ್ಯಗ್ರ ಸ್ವವಿಷಾಣ ರತ್ನಕಲಶಾನ್ ಹಸ್ತೈ ರ್ವಹಂತಂ ಭಜೇ ॥

14. ವಿಜಯ ಗಣಪತಿ

ಪಾಶಾಂಕುಶ ಸ್ವದಂತಾಮ್ರಫಲವಾನಾಖುವಾಹನಃ ।
ವಿಘ್ನಂ ನಿಹಂತು ಸಃ ಸರ್ವಂ ರಕ್ತವರ್ಣೋ ವಿನಾಯಕಃ ॥

15. ನೃತ್ಯ ಗಣಪತಿ

ಪಾಶಾಂಕುಶಾಪೂಪ ಕುಠಾರದಂತ -
ಚಂಚತ್ಕರಾಕ್ಲಪ್ತ ವರಾಂಗುಲೀಯಕಂ ।
ಪೀತಪ್ರಭಂ ಕಲ್ಪತರೋರಧಸ್ಥಂ
ಭಜಾಮಿ ನೃತ್ತೋಪಪದಂ ಗಣೇಶಂ ॥

16. ಊರ್ಧ್ವ ಗಣಪತಿ

ಕಹ್ಲಾರಶಾಲಿಕಮಲೇಕ್ಷುಕ ಚಾಪಬಾಣ
ದಂತ ಪ್ರರೋಹಕ ಗದೀ ಕನಕೋಜ್ವಲಾಂಗಂ ।
ಆಲಿಂಗನೋದ್ಯತಕರೋ ಹರಿತಾಂಗಯಷ್ಟ್ಯಾ
ದೇವ್ಯಾ ಕರೋತು ಶುಭಮೂರ್ಧ್ವಗಣಾಧಿಪೋ ಮೇ ॥

13

13. ಮಹಾ ಗಣಪತಿ

ದೇವಿಯೊಬ್ಬಳನ್ನು ಎಡತೊಡೆಯ ಮೇಲೆ ಕುಳ್ಳಿರಿಸಿಕೊಂಡಿರುವ ರೂಪ. ಹತ್ತು ಕೈಗಳು; ಕೈಗಳಲ್ಲಿ ಕ್ರಮವಾಗಿ ಗದೆ, ದಾಡೆ (ಸ್ವದಂತ), ರತ್ನಕಲಶ, ಬತ್ತದ ತೆನೆ (ವ್ರೀಹ್ಯಗ್ರ), ಚಕ್ರ, ಶಂಖ, ಕಬ್ಬಿನ ಜಲ್ಲೆ (ಇಕ್ಷುದಂಡ), ಕನ್ನೈದಿಲೆ ಹೂ (ಉತ್ಪಲ), ಮತ್ತು ಲಡ್ಡು (ವರದಾನ ಮುದ್ರೆಯಲ್ಲಿ). ಧ್ಯಾನಶ್ಲೋಕದಲ್ಲಿ ಉಳಿದೆಲ್ಲ ಆಯುಧಗಳೂ ಸಮನಾಗಿದ್ದು, ಲಡ್ಡುವಿಗೆ ಬದಲು ದಾಳಿಂಬೆ ಹಣ್ಣು (ಬೀಜಪೂರ) ಎಂದು ಒಕ್ಕಣೆಯಿದೆ. ದೇವಿಯ ಕೈಯಲ್ಲಿ ಕಮಲ. ಧ್ಯಾನಶ್ಲೋಕದ ಪ್ರಕಾರ, ತಲೆಯ ಮೇಲೆ ಚಂದ್ರ (ಇಂದುಚೂಡ), ಮತ್ತು ಮೂರು ಕಣ್ಣುಗಳು (ತ್ರಿಣೇತ್ರ) ಇರಬೇಕು. ಚಿತ್ರದಲ್ಲಿ ಈ ವಿವರಗಳು ಕಾಣುವುದಿಲ್ಲ. ಗಣಪತಿಯ ಮೈಬಣ್ಣ ನಸುಗೆಂಪು (ಅರುಣಚ್ಛಾಯ) ಎಂದು ಧ್ಯಾನಶ್ಲೋಕದಲ್ಲಿದೆ; ಚಿತ್ರಗಾರರು 'ಶಿಂಧೂರವರ್ನಾ' ಎಂದು ಬರೆದುಕೊಂಡಿದ್ದಾರೆ. 'ಅಂಮನವರು ಕನಕವರ್ನಾ' ಎಂದು ಚಿತ್ರಗಾರರು ಬರೆದುಕೊಂಡಿರುವ ವಿವರ ಧ್ಯಾನಶ್ಲೋಕದಲ್ಲಿಲ್ಲ.

14

14. ವಿಜಯ ಗಣಪತಿ

ಇಲಿಯ ಮೇಲೇರಿ ಹೋಗುತ್ತಿರುವ (ಆಖುವಾಹನ) ರೂಪ. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ತನ್ನ ದಾಡೆ (ದಂತ), ಅಂಕುಶ, ಪಾಶ ಮತ್ತು ಮಾವಿನ ಹಣ್ಣು (ಆಮ್ರಫಲ). ಧ್ಯಾನಶ್ಲೋಕದ ಪ್ರಕಾರ ಮೈಬಣ್ಣ ಕೆಂಪು (ರಕ್ತವರ್ಣ); ಚಿತ್ರದಲ್ಲಿ 'ಶಿಂಧೂರವರ್ನಾ' ಎಂದು ಕಾಣಿಸಿದೆ.

15

15. ನೃತ್ಯ ಗಣಪತಿ

ಕುಣಿತದಲ್ಲಿ ತೊಡಗಿರುವ ರೂಪ. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ದಾಡೆ (ದಂತ), ಅಂಕುಶ, ಪಾಶ ಮತ್ತು ಸಣ್ಣ ಕೊಡಲಿ (ಕುಠಾರ). ಧ್ಯಾನಶ್ಲೋಕದಲ್ಲಿ ಅಪೂಪ ಎಂಬುದನ್ನು ಒಂದು ಕೈಯಲ್ಲಿ ಕಾಣಿಸಬೇಕೆಂದೂ, ಕಲ್ಪವೃಕ್ಷದ ಅಡಿಯಲ್ಲಿ ಕುಣಿಯುತ್ತಿರಬೇಕೆಂದೂ (ಕಲ್ಪತರೋರಧಸ್ಥಂ) ವಿವರಗಳಿವೆ. ಇವು ಚಿತ್ರದಲ್ಲಿ ಇಲ್ಲ. ಮೈಬಣ್ಣ ಹಳದಿ (ಪೀತ) ಎಂದು ಧ್ಯಾನಶ್ಲೋಕ; ಚಿತ್ರದ ಪ್ರಕಾರ 'ಕನಕವರ್ನಾ'.

16

16. ಊರ್ಧ್ವ ಗಣಪತಿ

ದೇವಿಯೊಬ್ಬಳನ್ನು ಎಡತೊಡೆಯಮೇಲೆ ಕೂಡಿಸಿಕೊಂಡು ಒಂದು ಕೈಯಿಂದ ಆಕೆಯ ನಡುವನ್ನು ಆಲಿಂಗಿಸಿಕೊಂಡು ಸುಖಾಸೀನನಾಗಿ ಕುಳಿತಿರುವ ರೂಪ. ಎಂಟು ಕೈಗಳು; ಕ್ರಮವಾಗಿ ದಾಡೆ (ದಂತ), ಕಮಲ, ಕಲ್ಹಾರ, ಹೂಗೊಂಚಲು (ಧ್ಯಾನಶ್ಲೋಕದಲ್ಲಿ ಶಾಲಿ ಅಥವಾ ಬತ್ತದ ತೆನೆ ಎಂದಿದೆ), ಕಬ್ಬಿನ ಜಲ್ಲೆ (ಇಕ್ಷುಚಾಪ), ಗದೆ, ಹೂಗಳ ಬಾಣ (ಧ್ಯಾನಶ್ಲೋಕದಲ್ಲಿ ಬರಿಯ ಬಾಣ); ಉಳಿದ ಕೈ ಮೇಲೆ ಹೇಳಿದಂತೆ ದೇವಿಯನ್ನು ಆಲಿಂಗಿಸಿದೆ. ಸೊಂಡಿಲು ದೇವಿಯ ಸ್ತನವೊಂದನ್ನು ಅಪ್ಪಿಕೊಂಡಿದೆ. ಗಣಪತಿಯ ಮೈಬಣ್ಣ ಬಂಗಾರದ ಬಣ್ಣವೆಂದು ಧ್ಯಾನಶ್ಲೋಕದಲ್ಲೂ ('ಕನಕೋಜ್ವಲಾಂಗಂ') ಚಿತ್ರದಲ್ಲೂ ಇದೆ; ಹಾಗೆಯೇ ದೇವಿಯದು ಹಸಿರು ಬಣ್ಣವೆಂದು ಚಿತ್ರದಲ್ಲೂ 'ಹರಿತಾಂಗಯಷ್ಟಿ'ಯೆಂದು ಧ್ಯಾನಶ್ಲೋಕದಲ್ಲೂ ಹೇಳಿದೆ.

17. ಏಕಾಕ್ಷರ ಗಣಪತಿ

ರಕ್ತೋ ರಕ್ತಾಂಗ ರಾಗಾಂಶುಕ ಕುಸುಮ - ಯುತಸ್ತುಂದಿಲಶ್ಚಂದ್ರಮೌಲಿಃ ।
ರತ್ನೈರ್ಯುಕ್ತಸ್ತ್ರಿಭಿರ್ವಾಮನಕರಚರಣೋ ಬೀಜಪೂರಂ
ದಧಾನಃ ॥
ಹಸ್ತಾಗ್ರಾಕ್ಲಪ್ತ ಪಾಶಾಂಕುಶರದವರದೋ ನಾಗವಕ್ತ್ರೋಹಿಭೂಷಾ
ದೇವಃ ಪದ್ಮಾಸನಸ್ಥೋ ಭವತು ಸುಖಕರೋ ಭೂತಯೇ
ವಿಘ್ನರಾಜಃ ॥

18. ವರ ಗಣಪತಿ

ಸಿಂಧೂರಾಭಮಿಭಾನನಂ ತ್ರಿನಯನಂ ಹಸ್ತೇ ಚ ಪಾಶಾಂಕುಶೌ
ಬಿಭ್ರಾಣಂ ಮಧುಮತ್ಕಪಾಲಮನಿಶಂ ಸಾಧ್ವಿಂದುಮೌಲಿಂ ಭಜೇ ।
ಪುಷ್ಟ್ಯಾಶ್ಲಿಷ್ಟತನುಂ ಧ್ವಜಾಗ್ರಕರಯಾ ಪದ್ಮೋಲ್ಲಸದ್ಧಸ್ತಯಾ ।
ತದ್ಯೋನ್ಯಾಹಿತ ಪಾಣಿಮಾತ್ತವಸುಮತ್ ಪಾತ್ರೋಲ್ಲಸತ್
ಪುಷ್ಕರಂ ॥

19. ತ್ರ್ಯಕ್ಷರ ಗಣಪತಿ

ಗಜೇಂದ್ರವದನಂ ಸಾಕ್ಷಾಚ್ಚಲತ್ಕರ್ಣಸುಮಾಚರಂ
ಹೇಮವರ್ಣಂ ಚತುರ್ಬಾಹುಂ ಪಾಶಾಂಕುಶಧರಂ ವರಂ ।
ಸ್ವದಂತಂ ದಕ್ಷಿಣೇ ಹಸ್ತೇ ಸವ್ಯೇತ್ವಾಮ್ರಫಲಂ ತಥಾ
ಪುಷ್ಕರೇ ಮೋದಕಂ ಚೈವ ಧಾರಯಂತಮನುಸ್ಮರೇತ್ ॥

20. ಕ್ಷಿಪ್ರಪ್ರಸಾದ ಗಣಪತಿ

ಧೃತಪಾಶಾಂಕುಶ ಕಲ್ಪಲತಾ ಸ್ವದಂತಶ್ಚ ಬೀಜಪೂರಯುತಃ ।
ಶಶಿಶಕಲಕಲಿತಮೌಲಿ ಸ್ತ್ರಿಲೋಚನೋರುಣಶ್ಚ ಗಜವದನಃ ।
ಭಾಸುರಭೂಷಣದೀಪ್ತೋ ಬೃಹದುದರಃ ಪದ್ಮವಿಷ್ಟರೋಲ್ಲಸಿತಃ ।
ವಿಘ್ನಪಯೋಧರ ಪವನಃ ಕರಧೃತ ಕಮಲಃ ಸದಾಸ್ತು ಮೇ ಭೂತ್ಯೈ ॥

17

17. ಏಕಾಕ್ಷರ ಗಣಪತಿ

ಏಕಾಕ್ಷರವೆಂದರೆ ಪ್ರಣವ ಓಂಕಾರ (ಅಥವಾ ಗಣಪತಿಯ ಬೀಜಾಕ್ಷರವಾದ 'ಗಂ'). ಬೊಜ್ಜು ಹೊಟ್ಟೆ (ತುಂದಿಲ); ಗಿಡ್ಡ ಮೈ (ವಾಮನ); ಪದ್ಮಾಸನದಲ್ಲಿ ಕುಳಿತ ರೂಪ. ನಾಲ್ಕು ಕೈಗಳು; ಕ್ರಮವಾಗಿ ಕೈಗಳಲ್ಲಿ ದಾಡೆ (ದಂತ), ಅಂಕುಶ, ಪಾಶ, ಕಡಬು (ಮೋದಕ); ಸೊಂಡಿಲಲ್ಲಿ ದಾಳಿಂಬೆ ಹಣ್ಣು (ಬೀಜಪೂರ). ಧ್ಯಾನಶ್ಲೋಕದಲ್ಲಿ ಕಡುಬಿಗೆ ಬದಲು ವರದ ಹಸ್ತವೆಂದು ಕಾಣಿಸಿದ್ದಾರೆ; ಆದರೆ 'ಹೂವನ್ನು ಹೊಂದಿದ್ದಾನೆ' ('ಕುಸುಮಯುತಃ') ಎಂದೂ, ಚಂದ್ರನನ್ನು ತಲೆಯ ಮೇಲೆ ಧರಿಸಿದ್ದಾನೆ ('ಚಂದ್ರಮೌಳಿಃ') ಎಂದೂ, ಹಾವಿನ ಆಭರಣವೆಂದೂ ('ಅಹಿಭೂಷಾ') ಅಲ್ಲಿ ಇರುವ ಒಕ್ಕಣೆ ಚಿತ್ರದಲ್ಲಿ ಕಾಣಸಿಗುವುದಿಲ್ಲ. ಧ್ಯಾನಶ್ಲೋಕದಂತೆ ಮೈಬಣ್ಣ ಕೆಂಪು (ರಕ್ತ, ಚಿತ್ರದಲ್ಲಿ ಶಿಂಧೂರ). ಅಂಗರಾಗ ಮತ್ತು ಬಟ್ಟೆಯೂ ಕೆಂಪು.

18

18. ವರ ಗಣಪತಿ

ಎಡತೊಡೆಯ ಮೇಲೆ ಪುಷ್ಟಿಯೆಂಬ ಹೆಸರಿನ ದೇವಿಯನ್ನು ಕೂಡಿಸಿಕೊಂಡು ಒಂದು ಕೈಯಿಂದ ಆಕೆಯ ನಡುವನ್ನು ಅಪ್ಪಿ ಆಕೆಯ ಗುಹ್ಯಾಂಗದಲ್ಲಿ ಕೈಬೆರಳುಗಳನ್ನಿರಿಸಿಕೊಂಡು ಮಹಾರಾಜ ಲೀಲೆಯಲ್ಲಿ ಕುಳಿತಿರುವ ರೂಪ. ನಾಲ್ಕು ಕೈಗಳು; ಮೂರು ಕೈಗಳಲ್ಲಿ ಕ್ರಮವಾಗಿ ತಲೆಯೋಡೆ (ಕಪಾಲ, ಹೆಂಡದಿಂದ ತುಂಬಿರುವುದೆಂದು ಧ್ಯಾನಶ್ಲೋಕದ ವಿವರ, 'ಮಧುಮತ್ ಕಪಾಲ'), ಅಂಕುಶ, ಪಾಶ; ದೇವಿಯ ಕೈಯಲ್ಲಿ ಕೆಂದಾವರೆ (ಪದ್ಮ) ಹೂ; ಧ್ವಜವನ್ನೂ ಇರಿಸಿಕೊಂಡಿದ್ದಾಳೆ. ಗಣಪತಿಯ ಸೊಂಡಿಲಲ್ಲಿ ರತ್ನಗಳು ತುಂಬಿದ ಕೊಡ ('ವಸುಮತ್ ಪಾತ್ರ'). ಧ್ಯಾನಶ್ಲೋಕದಲ್ಲಿ ಈ ವಿವರಗಳೊಂದಿಗೆ ಮೂರು ಕಣ್ಣುಗಳೆಂದೂ ('ತ್ರಿನಯನ'), ಚಂದ್ರನನ್ನು ತಲೆಯ ಮೇಲೆ ಧರಿಸಿದ್ದಾನೆಂದೂ ('ಇಂದುಮೌಳಿ') ಇದೆ; ಇವು ಚಿತ್ರದಲ್ಲಿ ಕಾಣಸಿಗುವುದಿಲ್ಲ.ಗಣಪತಿಯ ಮೈಬಣ್ಣ ಕೆಂಪು (ಶಿಂಧೂರ).

19

19. ತ್ರ್ಯಕ್ಷರ ಗಣಪತಿ

ಮೂರು ಅಕ್ಷರಗಳ (ಎಂದರೆ ಓಂಕಾರದಲ್ಲಿ ಅಡಕವಾಗಿರುವ ಅ, ಉ ಮತ್ತು ಮ ಎಂಬ ವರ್ಣಗಳು) ರೂಪ. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ದಾಡೆ (ಸ್ವದಂತ), ಅಂಕುಶ, ಪಾಶ ಮತ್ತು ಮಾವಿನ ಹಣ್ಣು (ಆಮ್ರ ಫಲ). ಮಾವಿನ ಹಣ್ಣು ಹಿಡಿದಿರುವ ಕೈ ವರದಾನ ಮುದ್ರೆಯಲ್ಲೂ ಇದೆ; ಸೊಂಡಿಲಲ್ಲಿ ಲಡ್ಡು (ಮೋದಕ ಎಂದು ಧ್ಯಾನಶ್ಲೋಕ). ಚಿತ್ರವು ಧ್ಯಾನಶ್ಲೋಕಕ್ಕೆ ಸರಿಯಾಗಿದೆ.



20

20. ಕ್ಷಿಪ್ರಪ್ರಸಾದ ಗಣಪತಿ

ಪೂಜಿಸಿದರೆ ಒಡನೆಯೆ ಪ್ರಸನ್ನವಾಗುವ ರೂಪ. ಆರು ಕೈಗಳು; ಕೈಗಳಲ್ಲಿ ಕ್ರಮವಾಗಿ ದಾಡೆ (ದಂತ), ಕಲ್ಪಲತೆ, ಅಂಕುಶ, ಪಾಶ, ಕೆಂದಾವರೆ (ಕಮಲ ಹೂ) ಮತ್ತು ದಾಳಿಂಬೆ ಹಣ್ಣು (ಬೀಜಪೂರ). ಧ್ಯಾನಶ್ಲೋಕದಲ್ಲಿ ಈ ವಿವರಗಳೊಂದಿಗೆ ತಲೆಯ ಮೇಲೆ ಚಂದ್ರಖಂಡ ('ಶಶಿ ಕಲ ಕಲಿತ ಮೌಳಿ'), ಮೂರು ಕಣ್ಣುಗಳು (ತ್ರಿಲೋಚನ), ದೊಡ್ಡ ಹೊಟ್ಟೆ (ಬೃಹದುದರ), ತಾವರೆ ಹೂಗಳ ಮೇಲೆ ಕೂತವನು (ಪದ್ಮ ವಿಷ್ಟರೋಲ್ಲಸಿತ) ಎಂದೂ ಇದೆ. ಚಿತ್ರಗಾರರು ಇವನ್ನು ಗಮನಿಸಿಲ್ಲ. ಮೈಬಣ್ಣ ನಸುಗೆಂಪು (ಅರುಣ) ಎಂದು ಧ್ಯಾನಶ್ಲೋಕ; 'ಶಿಂಧೂರ' ಎಂದು ಚಿತ್ರದಲ್ಲಿ ಒಕ್ಕಣೆ.

21. ಹರಿದ್ರಾ ಗಣಪತಿ

ಹರಿದ್ರಾಭಂ ಚತುರ್ಬಾಹುಂ ಹರಿದ್ರಾವದನಂ ಪ್ರಭುಂ ।
ಪಾಶಾಂಕುಶೌ ಧರಂ ದೇವಂ ಮೋದಕಂ ದಂತಮೇವ ಚ ।
ಭಕ್ತಾಭಯಪ್ರದಾತಾರಂ ವಂದೇ ವಿಘ್ನವಿನಾಶನಂ ॥

22. ಏಕದಂತ ಗಣಪತಿ

ಲಂಬೋದರಂ ಶ್ಯಾಮತನುಂ ಗಣೇಶಂ
ಕುಠಾರಮಕ್ಷಸ್ರಜಮೂರ್ಧ್ವಗಾತ್ರಂ ।
ಸಲಡ್ಡುಕಂ ದಂತಮಧಃ ಕರಾಭ್ಯಾಂ
ವಾಮೇತರಾಭ್ಯಾಂ ಚ ದಧಾನಮೀಡೇ ॥

23. ಸೃಷ್ಟಿ ಗಣಪತಿ

ಪಾಶಾಂಕುಶ ಸ್ವದಂತಾಮ್ರಫಲವಾನಾಖುವಾಹನಂ ।
ವಿಘ್ನಂ ನಿಹಂತು ನಃ ಶೋಣಃ ಸೃಷ್ಟಿದಕ್ಷೋ ವಿನಾಯಕಃ ॥

24. ಉದ್ದಂಡ ಗಣಪತಿ

ಕಹ್ಲಾರಾಂಬುಜ ಬೀಜಪೂರಕ ಗದಾ ದಂತೇಕ್ಷುಚಾಪಂ ಸುಮಂ ।
ಬಿಭ್ರಾಣೋ ಮಣಿಕುಂಭಶಾಲಿ ಕಲಶಂ ಪಾಶಂ ಸೃಣಿಂ ಚಾಬ್ಜಕಂ ।
ಗೌರಾಂಗ್ಯಾ ರುಚಿರಾರವಿಂದ ಕರಯಾ ದೇವ್ಯಾ ಸಮಾಲಿಂಗತಃ ।
ಶೋಣಾಂಗಃ ಶುಭಮಾತನೋತು ಭಜತಾಮುದ್ದಂಡ
ವಿಘ್ನೇಶ್ವರಂ ॥



21

21. ಹರಿದ್ರಾ ಗಣಪತಿ

ಅರಿಶಿನ ಬಣ್ಣದ ಮೈಯೆಂದು ಹರಿದ್ರಾ ಗಣಪತಿ. ಅರಿಶಿನದ ಕೊಂಬಿನಲ್ಲಿ ಗಣಪತಿಯನ್ನು ಆವಾಹಿಸಿ ಪೂಜೆ ಮಾಡುವ ವಾಡಿಕೆಯಿದೆ; ಗಣಪತಿಯ ಕಳೆಯನ್ನು ತಳೆದ ಅರಿಶಿನದ ಕೊಂಬೇ ದಿಟವಾಗಿ 'ಹರಿದ್ರಾ ಗಣಪತಿ'. ಆದರೆ ಇಲ್ಲಿ ಇದೊಂದು ಮೂರ್ತಿಯನ್ನೆ ಕಲ್ಪಿಸಿಕೊಂಡಿದ್ದಾರೆ. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ದಾಡೆ (ದಂತ), ಅಂಕುಶ, ಪಾಶ ಮತ್ತು ಮೋದಕ. ದಾಡೆಯನ್ನು ಹಿಡಿದ ಬಲಗೈ ಅಭಯಮುದ್ರೆಯಲ್ಲಿದೆ; ಮೋದಕವನ್ನು ಹಿಡಿದ ಎಡಕೈ ವರದಮುದ್ರೆಯಲ್ಲಿ. ಧ್ಯಾನಶ್ಲೋಕದ ವಿವರಗಳೇ ಚಿತ್ರದಲ್ಲಿ.

22

22. ಏಕದಂತ ಗಣಪತಿ

ಗಣಪತಿಯ ಎಲ್ಲಾ ರೂಪಗಳಲ್ಲೂ ಸಾಮಾನ್ಯವಾಗಿ ಒಂದೇ ದಾಡೆಯಾದರೂ 'ಏಕದಂತ'ವೆಂಬುದೆ ಒಂದು ರೂಪಭೇದ; ಏಕದಂತನಾದ ಸಂದರ್ಭದ ಸೂಚನೆಯಿದ್ದೀತು. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ದಾಡೆ (ದಂತ), ಅಕ್ಷಮಾಲೆ, ಸಣ್ಣ ಕೊಡಲಿ (ಕುಠಾರ), ಲಡ್ಡು. ಧ್ಯಾನಶ್ಲೋಕದಲ್ಲಿ ಇದೇ ವಿವರಗಳಿದ್ದು, ಈ ರೂಪವು 'ಶ್ಯಾಮತನು' ಎಂದಿದೆ; ಚಿತ್ರಗಾರರು ಇದನ್ನು 'ಹಸಿರುವರ್ಣಾ' ಎಂದು ಗ್ರಹಿಸಿದ್ದಾರೆ.

23

23. ಸೃಷ್ಟಿ ಗಣಪತಿ

ಇಲಿಯನ್ನೇರಿ ಸಾಗುತ್ತಿರುವ ರೂಪ. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ದಾಡೆ (ದಂತ), ಅಂಕುಶ, ಪಾಶ, ಮಾವಿನ ಹಣ್ಣು (ಆಮ್ರಫಲ). ಧ್ಯಾನಶ್ಲೋಕದಲ್ಲಿ ಇದೇ ವಿವರಗಳಿದ್ದು ಈ ರೂಪವು ಗಣಪತಿಯು 'ಸೃಷ್ಟಿದಕ್ಷ' ನೆಂಬುದನ್ನು ಹೇಳುವುದೆನ್ನುತ್ತದೆ. ಮೈಬಣ್ಣ ಕೆಂಪು (ಶೋಣ, ಚಿತ್ರದಲ್ಲಿ ಶಿಂಧೂರ).

24

24. ಉದ್ದಂಡ ಗಣಪತಿ

ದೇವಿಯನ್ನು ಎಡತೊಡೆಯಮೇಲೆ ಕೂಡಿಸಿಕೊಂಡು ಪದ್ಮಾಸನದಲ್ಲಿ ಕುಳಿತಿರುವ ರೂಪ. ಹನ್ನೆರಡು ಕೈಗಳು; ಕೈಗಳಲ್ಲಿ ಕ್ರಮವಾಗಿ ಗದೆ, ದಾಡೆ (ದಂತ), ಕಲಶ, ತಾವರೆ ಹೂ (ಅಂಬುಜ), ಕಲ್ಹಾರ ಹೂ, ಶಂಖ, ಅಂಕುಶ, ಬತ್ತದ ತೆನೆ (ಶಾಲಿ), ಪಾಶ, ಚಕ್ರ, ದಾಳಿಂಬೆ ಹಣ್ಣು (ಬೀಜಪೂರ), ಕಬ್ಬಿನ ಜಲ್ಲೆ (ಇಕ್ಷುಚಾಪ). ಸೊಂಡಿಲಲ್ಲಿ ಮಣಿಕುಂಭ. ಧ್ಯಾನಶ್ಲೋಕದಲ್ಲಿ ಈ ವಿವರಗಳೊಂದಿಗೆ 'ಸುಮ' (ಎಂದರೆ ಹೂವು) ಎಂಬುದನ್ನು ಒಂದು ಕೈಯಲ್ಲಿ ಕಾಣಿಸಬೇಕೆಂದಿದೆ; 'ಅಂಬುಜ', 'ಅಬ್ಜಕ' (ತಾವರೆ ಹೂ) ಎಂದು ಬೇರೆ ಬೇರೆಯಾಗಿ ಕಾಣಿಸಿದೆ. ಬಹುಶಃ ಎರಡನೆಯ (ಎಂದರೆ 'ಅಬ್ಜಕ') ಉಲ್ಲೇಖ ಆಸನಕ್ಕೆ ಸಂಬಂಧಿಸಿದಂತೆ ಇರಬೇಕು. ದೇವಿಯು ಬಿಳಿ ಬಣ್ಣದವಳೆಂದೂ (ಗೌರಾಂಗಿ), ಕೈಯಲ್ಲಿ ತಾವರೆ ಹೂ (ಅರವಿಂದ) ಹಿಡಿದಿದ್ದಾಳೆಂದೂ ವಿವರಗಳಿವೆ. ಗಣಪತಿಯ ಮೈಬಣ್ಣ ಕೆಂಪೆಂದೂ ('ಶೋಣಾಂಗಃ') ಒಕ್ಕಣೆಯಿದೆ. ಆದರೆ ಚಿತ್ರದಲ್ಲಿ ಗಣಪತಿಯು 'ಕನಕವರ್ನ'ವೆಂದೂ, 'ಅಂಮ್ಮನವರು ಹಸಿರುವರ್ನ'ವೆಂದೂ ಬರಹವಿದೆ.

25. ಋಣ ವಿಮೋಚಕ ಗಣಪತಿ

ಪಾಶಾಂಕುಶೌ ದಂತಜಂಬು ದಧಾನಃ ಸ್ಫಾಟಿಕಪ್ರಭಃ ।
ರಕ್ತಾಂಶುಕೋ ಗಣಪತಿರ್ಮುದೇ ಸ್ಯಾದೃಣಮೋಚಕಃ ॥

26. ಧುಂಢಿ ಗಣಪತಿ

ಅಕ್ಷಮಾಲಾಂ ಕುಠಾರಂ ಚ ರತ್ನಪಾತ್ರಂ ಸ್ವದಂತಕಂ ।
ಧತ್ತೇ ಕರೈರ್ವಿಘ್ನರಾಜೋ ಧುಂಢಿನಾಮಾ ಮುದೇಽಸ್ತು ನಃ ॥

27. ದ್ವಿಮುಖ ಗಣಪತಿ

ಸ್ವದಂತ ಪಾಶಾಂಕುಶರತ್ನಪಾತ್ರಂ
ಕರೈರ್ದಧಾನೋ ಹರಿನೀಲಗಾತ್ರಃ ।
ರಕ್ತಾಂಶುಕೋ ರತ್ನಕಿರೀಟಮಾಲೀ
ಭೂತ್ಯೈ ಸದಾ ಮೇ ದ್ವಿಮುಖೋ ಗಣೇಶಃ ॥

28. ತ್ರಿಮುಖ ಗಣಪತಿ

ಶ್ರೀಮತ್ತೀಕ್ಷ್ಣಶಿಖಾಂಕುಶಾಕ್ಷ ವರದಾನ್ ದಕ್ಷೇ ದಧಾನಃ ಕರೈಃ
ಪಾಶಂ ಚಾಮೃತಪೂರ್ಣಕುಂಭಮಭಯಂ ವಾಮೇ ದಧಾನೋ ಮುದಾ ।
ಪೀಠೇ ಸ್ವರ್ಣಮಯಾರವಿಂದ ವಿಲಸತ್ ಸತ್ಕರ್ಣಿಕಾ ಭಾಸುರೇ
ಸ್ವಾಸೀನಸ್ತ್ರಿಮುಖಃ ಪಲಾಶರುಚಿರೋ ನಾಗಾನನಃ ಪಾತು ನಃ ॥



25

25. ಋಣ ವಿಮೋಚಕ ಗಣಪತಿ

ಸಾಲಗಾರರ ಸಂಕಟವನ್ನು ತೀರಿಸುವ ರೂಪ. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ದಾಡೆ (ದಂತ), ಅಂಕುಶ, ಪಾಶ, ಜಂಬೂಫಲ. ಗಣಪತಿಯ ಮೈಬಣ್ಣ ಸ್ಫಟಿಕದಂತೆ ಬೆಳ್ಳಗೆ ಹೊಳೆಯುವುದು ('ಸ್ಫಾಟಿಕ ಪ್ರಭ'); ಚಿತ್ರಗಾರರು 'ಶ್ವೇತವರ್ಣ' ಎಂದು ಕಾಣಿಸಿದ್ದಾರೆ. ಧ್ಯಾನಶ್ಲೋಕದ ಪ್ರಕಾರ ಅವನು ಉಟ್ಟಿರುವ ಬಟ್ಟೆ ಕೆಂಪು ಬಣ್ಣದ್ದು.

26

26. ಧುಂಢಿ ಗಣಪತಿ

(ಚಿತ್ರವಲ್ಲಿ ಧುಂಡಿ ಗಣಪತಿ) ಕಾಶಿಯಲ್ಲಿರುವ ಪ್ರಸಿದ್ಧ ಗಣಪತಿಯ ರೂಪ; ಹೆಸರಿಗೆ ಕಾರಣ ತಿಳಿಯದು. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ತನ್ನ ದಾಡೆ (ಸ್ವದಂತ), ಅಕ್ಷಮಾಲೆ, ಸಣ್ಣ ಕೊಡಲಿ (ಕುಠಾರ), ಮತ್ತು ರತ್ನಪಾತ್ರೆ. ಧ್ಯಾನಶ್ಲೋಕದಲ್ಲಿ ಇಷ್ಟೇ ವಿವರಗಳು. ಚಿತ್ರದಲ್ಲಿ ಗಣಪತಿಯ ಮೈಬಣ್ಣ 'ಶಿಂಧೂರ'ವೆಂದು ಕಾಣಿಸಿದೆ.



27

27. ದ್ವಿಮುಖ ಗಣಪತಿ

ಎರಡು ತಲೆಗಳ ರೂಪ. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ತನ್ನ ದಾಡೆ (ಸ್ವದಂತ), ಅಂಕುಶ, ಪಾಶ ಮತ್ತು ಕಮಂಡಲು (ಧ್ಯಾನಶ್ಲೋಕದಲ್ಲಿ 'ರತ್ನಪಾತ್ರ'). ಮೈಬಣ್ಣ ಹಸಿರು ಎಂದು ಚಿತ್ರದಲ್ಲಿದೆ; ಧ್ಯಾನಶ್ಲೋಕ 'ಹರಿನೀಲ ಗಾತ್ರಃ' ಎನ್ನುತ್ತದೆ. ಧ್ಯಾನಶ್ಲೋಕದ ಪ್ರಕಾರ ಅವನು ಉಟ್ಟಿರುವ ಬಟ್ಟೆ ಕೆಂಪುಬಣ್ಣದ್ದು ('ರಕ್ತಾಂಶುಕ'); ಅವನ ತಲೆಯ ಮೇಲೆ ರತ್ನಕಿರೀಟ.



28

28. ತ್ರಿಮುಖ ಗಣಪತಿ

ಮೂರು ತಲೆಗಳ ರೂಪ. ಆರು ಕೈಗಳು; ಕೈಗಳಲ್ಲಿ ಕ್ರಮವಾಗಿ ವರದಮುದ್ರೆ, ಅಂಕುಶ, ಅಕ್ಷಮಾಲೆ, ಪಾಶ, ಅಮೃತಪೂರ್ಣ ಕುಂಭ ಮತ್ತು ಅಭಯಮುದ್ರೆ. ಬಂಗಾರದ ಕಮಲದ ಮೇಲೆ ('ಸ್ವರ್ಣಮಯಾರವಿಂದ') ಕುಳಿತಿದ್ದಾನೆ. ಮೈಬಣ್ಣ ಮುತ್ತುಗದ ಹೂನಂತೆ ('ಪಲಾಶರುಚಿರ') ಎಂದು ಧ್ಯಾನಶ್ಲೋಕ; ಚಿತ್ರದಲ್ಲಿ 'ಶಿಂಧೂರವರ್ಣ'.

29. ಸಿಂಹ ಗಣಪತಿ

ವೀಣಾಂ ಕಲ್ಪಲತಾಮರಿಂ ಚ ವರದಂ ಧತ್ತೇ ವಿಧತ್ತೇ ಕರೈಃ
ವಾಮೇ ತಾಮರಸಂ ಚ ರತ್ನಕಲಶಂ ಸನ್ಮಂಜರೀಂ ಚಾಭಯಂ ।
ಶುಂಡಾದಂಡಲಸನ್ ಮೃಗೇಂದ್ರವದನಃ ಶಂಖೇಂದು ಗೌರಃ ಶುಭೋ
ದೀವ್ಯದ್ರತ್ನನಿಭಾಂಶುಕೋ ಗಣಪತಿಃ ಪಾಯಾದಪಾಯಾತ್ಸ ನಃ ॥

30. ಯೋಗ ಗಣಪತಿ

ಯೋಗಾರೂಢೋ ಯೋಗಪಟ್ಟಾಭಿರಾಮೋ
ಬಾಲಾರ್ಕಾಭಶ್ಚಂದ್ರನೀಲಾಂಶುಕಾಢ್ಯಃ ।
ಪಾಶೇಕ್ಷ್ವಕ್ಷಾನ್ ಯೋಗದಂಡಂ ದಧಾನೋ
ಪಾಯಾನ್ನಿತ್ಯಂ ಯೋಗವಿಘ್ನೇಶ್ವರೋ ನಃ ॥

31. ದುರ್ಗ ಗಣಪತಿ

ತಪ್ತಕಾಂಚನಸಂಕಾಶಶ್ಚಾಷ್ಟಹಸ್ತೊ ಮಹತ್ತನುಃ
ದೀಪ್ತಾಂಕುಶಂ ಶರ ಚಾಕ್ಷಂ ದಂತಂ ದಕ್ಷೇ ವಹನ್ ಕರೈಃ ।
ವಾಮೇ ಪಾಶಂ ಕಾರ್ಮುಕಂ ಚ ಲತಾಂ ಜಂಬು ಧಧತ್ಕರೈಃ
ರಕ್ತಾಂಶುಕಃ ಸದಾ ಭೂಯಾದ್ದುರ್ಗಾಗಣಪತಿರ್ಮುದೇ ॥

32. ಸಂಕಟಹರ ಗಣಪತಿ

ಬಾಲಾರ್ಕಾರುಣಕಾಂತಿರ್ವಾಮೇ ಬಾಲಾಂ ವಹನ್ನಂಕೇ ।
ಲಸದಿಂದೀವರ ಹಸ್ತಾಂ ಗೌರಾಂಗೀಂ ರತ್ನಶೋಭಾಢ್ಯಾಂ ।
ದಕ್ಷೇಽಂಕುಶವರದಾನಂ ವಾಮೇ ಪಾಶಂ ಚ ಪಾಯಸಪಾತ್ರಂ ।
ನೀಲಾಂಶುಕಲಸಮಾನಃ ಪೀಠೇ ಪದ್ಮಾರುಣೇ ತಿಷ್ಠನ್ ।
ಸಂಕಟಹರಣಃ ಪಾಯಾತ್ ಸಂಕಟಪೂಗಾದ್ಗಜಾನನೋ
ನಿತ್ಯಂ ॥



29

29. ಸಿಂಹ ಗಣಪತಿ

ಸಿಂಹದ ಮುಖ, ಆನೆಯ ಸೊಂಡಿಲು ಕೂಡಿರುವ ರೂಪ. ಎಂಟು ಕೈಗಳು; ಕೈಗಳಲ್ಲಿ ಕ್ರಮವಾಗಿ ವರದಮುದ್ರೆ, ಚಕ್ರ (ಅರಿ), ಕಲ್ಪಲತೆ, ವೀಣೆ, ತಾವರೆ ಹೂ (ತಾಮರಸ), ಹೂಗೊಂಚಲು (ಸನ್ಮಂಜರಿ), ರತ್ನಕಲಶ ಮತ್ತು ಅಭಯಮುದ್ರೆಯೊಂದಿಗೆ ದಾಳಿಂಬೆ ಹಣ್ಣು. ಧ್ಯಾನಶ್ಲೋಕದಲ್ಲೂ ಇದೇ ವಿವರಗಳಿವೆ. ಧ್ಯಾನಶ್ಲೋಕದ ಪ್ರಕಾರ ಶಂಖದಂತೆ ಬೆಳ್ಳಗಿರುವ ಮೈಬಣ್ಣ; ಚಿತ್ರದಲ್ಲಿ 'ಸ್ವೇತವರ್ಣ'.



30

30. ಯೋಗ ಗಣಪತಿ

ಯೋಗ ಪಟ್ಟದಲ್ಲಿ (ಯೋಗಾರೂಢನಾಗಿ) ಕುಳಿತ ರೂಪ. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ ಅಕ್ಷಮಾಲೆ, ಕಬ್ಬಿನ ಜಲ್ಲೆ (ಇಕ್ಷು), ಪಾಶ ಮತ್ತು ಯೋಗದಂಡ. ಧ್ಯಾನಶ್ಲೋಕದಲ್ಲಿ ಇದೇ ವಿವರಗಳು. ಚಿತ್ರದಲ್ಲಿ 'ಶಿಂಧೂರವರ್ಣ'ವೆಂಬ ಒಕ್ಕಣೆಯಿದ್ದರೆ ಧ್ಯಾನಶ್ಲೋಕದಲ್ಲಿ 'ಎಳೆಸೂರ್ಯನ ಬೆಳಕಿನಂತೆ ಹೊಳೆಯುವವ' ('ಬಾಲಾರ್ಕಾಭ') ಎಂಬ ವರ್ಣನೆಯಿದೆ.

31

31. ದುರ್ಗ ಗಣಪತಿ

ಕಷ್ಟಗಳಿಂದ ದಾಟಿಸುವ ರೂಪ. ಎಂಟು ಕೈಗಳು; ಕೈಗಳಲ್ಲಿ ಕ್ರಮವಾಗಿ ಅಂಕುಶ, ದಾಡೆ (ದಂತ), ಅಕ್ಷಮಾಲೆ, ಬಾಣ, ಅಂಕುಶ, ಧನಸ್ಸು (ಕಾರ್ಮುಕ), ಕಲ್ಪಲತೆ, ಜಂಬೂಫಲ ಮತ್ತು ಪಾಶ. ಧ್ಯಾನಶ್ಲೋಕಕ್ಕೆ ಚಿತ್ರ ಸರಿಯಾಗಿದೆ. ಚಿತ್ರದಲ್ಲಿ 'ಕನಕವರ್ಣ'ವೆಂದು ಕಾಣಿಸಿದ್ದರೆ ಧ್ಯಾನಶ್ಲೋಕವೂ 'ತಪ್ತಕಾಂಚನ ಸಂಕಾಶ' ಎನ್ನುತ್ತದೆ. ಧ್ಯಾನಶ್ಲೋಕದ ಪ್ರಕಾರ ಅವನು ಉಟ್ಟಿರುವ ಬಟ್ಟೆ ಕೆಂಪುಬಣ್ಣದ್ದು ('ರಕ್ತಾಂಶುಕಃ').

32

32. ಸಂಕಟಹರ ಗಣಪತಿ

ಮೇಲಡರಿಬರುವ ತೊಂದರೆಗಳನ್ನು ನೀಗಿಸುವ ರೂಪ. ಎಡತೊಡೆಯ ಮೇಲೆ ದೇವಿಯನ್ನು ಕೂಡಿಸಿಕೊಂಡಿದ್ದಾನೆ. ನಾಲ್ಕು ಕೈಗಳು; ಕೈಗಳಲ್ಲಿ ಕ್ರಮವಾಗಿ, ವರದ ಮುದ್ರೆ (ವರದಾನ), ಅಂಕುಶ, ಪಾಶ ಮತ್ತು ಪಾಯಸಪಾತ್ರೆ. ಕೆಂದಾವರೆ ಹೂವಿನ ಮೇಲೆ ('ಪೀಠೇ ಪದ್ಮಾರುಣೆ') ಕುಳಿತಿದ್ದಾನೆ. ಧ್ಯಾನಶ್ಲೋಕಕ್ಕೆ ಚಿತ್ರ ಸರಿಯಾಗಿದೆ. ದೇವಿಯ ಕೈಯಲ್ಲಿ ಕನ್ನೈದಿಲೆ ಹೂ (ಇಂದೀವರ). ಗಣಪತಿಯ ಮೈಬಣ್ಣ ನಸುಗೆಂಪು ('ಬಾಲಾರ್ಕಾರುಣ ಕಾಂತಿ') ಎಂದು ಧ್ಯಾನಶ್ಲೋಕ; ಶಿಂಧೂರವರ್ಣವೆಂದು ಚಿತ್ರದಲ್ಲಿ ಒಕ್ಕಣೆ. ದೇವಿಯ ಮೈಬಣ್ಣ ಬಿಳಿ (ಗೌರಾಂಗಿ)ಯೆಂದು ಧ್ಯಾನಶ್ಲೋಕ; ಕನಕವರ್ಣವೆಂದು ಚಿತ್ರದಲ್ಲಿ ಒಕ್ಕಣೆ.

1. ಬಾಲ ಗಣಪತಿ

2. ತರುಣ ಗಣಪತಿ

3. ಭಕ್ತ ಗಣಪತಿ

4. ವೀರ ಗಣಪತಿ



5. ಶಕ್ತಿ ಗಣಪತಿ

6. ದ್ವಿಜ ಗಣಪತಿ

7. ಸಿದ್ಧಿ ಗಣಪತಿ

8. ಉಚ್ಛಿಷ್ಟ ಗಣಪತಿ

9. ವಿಘ್ನ ಗಣಪತಿ

10. ಕ್ಷಿಪ್ರ ಗಣಪತಿ

11. ಹೇರಂಬ ಗಣಪತಿ

12. ಲಕ್ಷ್ಮೀ ಗಣಪತಿ

13. ಮಹಾ ಗಣಪತಿ

14. ವಿಜಯ ಗಣಪತಿ

15. ನೃತ್ಯ ಗಣಪತಿ

16. ಊರ್ಧ್ವ ಗಣಪತಿ

17. ಏಕಾಕ್ಷರ ಗಣಪತಿ



18. ವರ ಗಣಪತಿ

19. ತ್ರ್ಯಕ್ಷರ ಗಣಪತಿ

20. ಕ್ಷಿಪ್ರಪ್ರಸಾದ ಗಣಪತಿ



21. ಹರಿದ್ರಾ ಗಣಪತಿ

22. ಏಕದಂತ ಗಣಪತಿ



23. ಸೃಷ್ಟಿ ಗಣಪತಿ

24. ಉದ್ದಂಡ ಗಣಪತಿ

25. ಋಣ ವಿಮೋಚಕ ಗಣಪತಿ

26. ಧುಂಢಿ ಗಣಪತಿ

27. ದ್ವಿಮುಖ ಗಣಪತಿ



28. ತ್ರಿಮುಖ ಗಣಪತಿ

29. ಸಿಂಹ ಗಣಪತಿ

30. ಯೋಗ ಗಣಪತಿ

31. ದುರ್ಗ ಗಣಪತಿ



32. ಸಂಕಟಹರ ಗಣಪತಿ